ಕಾಡಾ

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು
ಮೈಸೂರು

ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳಿಗೆ ಮಂಡಿಸುವ 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

COMMAND AREA DEVELOPMENT AUTHORITY
CAUVERY BASIN PROJECTS
MYSORE.

SUBMISSION OF AUDIT REPORT FOR THE YEAR 2016-17 TO BOTH HOUSES OF KARNATAKA LEGISLATURE

2016–17ನೇ ಸಾಲಿನ ಕಾಡಾ ಕಾವೇರಿ ಜಲಾನಯನ ಯೋಜನೆಗಳು, ಮೈಸೂರು ಕಛೇರಿಯ ಲೆಕ್ಕತಪಾಸಣಾ ವರದಿಯ

ಆಕ್ಷೇಪಣೆ ಮತ್ತು ವಸೂಲಾತಿ ವಿವರ

ಕ್ರ.ಸಂ	ಕಂಡಿಕೆ ಸಂಖ್ಯೆ	ವಿವರ	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	1	ಹಿಂದಿನ ಸಾಲುಗಳ ಲೆಕ್ಕ ತಪಾಸಣಾ ವರದಿಗಳಿಗೆ ಅನುಸರಣಾ ವರದಿಗಳನ್ನು ಪೂರ್ಣವಾಗಿ ಸಲ್ಲಿಸದಿರುವ ಬಗ್ಗೆ	–	–
2	2	ಆಯವ್ಯಯದ ಬಗ್ಗೆ	–	–
3	3	ಆರ್ಥಿಕ ಪರಿಸ್ಥಿತಿ ಬಗ್ಗೆ	–	–
4	3(ಎ)	ಆರ್ಥಿಕ ಪ್ರತ್ಯಾಧಿಕಾರದ ಅನುಮೋದನೆಯ ಆದೇಶದ ಪ್ರತಿಯನ್ನು ಹಾಜರುಪಡಿಸದಿರುವುದು (Deligation of Financial power)	–	–
5	3(ಬಿ)	ಅನುದಾನದ ಬಗ್ಗೆ	–	–
6	4	ನಗದು ಪುಸ್ತಕದ ಬಗ್ಗೆ	–	–
7	5	ಅಂಚೆ ಸೇವಾ ಚೀಟಿ ವಿವರಗಳು (ಆಡಳಿತಾಧಿಕಾರಿಗಳ ಕಛೇರಿ)	–	–
8	6	ಅಂಚೆ ಸೇವಾ ಚೀಟಿ ವಿವರಗಳು (A. E.E No–2 ವಿಭಾಗ) (ಮೈಸೂರು)	–	–
9	7	ಅಂಚೆ ಸೇವಾ ಚೀಟಿ ವಿವರಗಳು (E.E No–1 ತುಮಕೂರು)	–	–
10	7(ಎ)	ಅಂಚೆ ಸೇವಾ ಚೀಟಿ ವಿವರಗಳು (A. E.E No–1 ವಿಭಾಗ ತುಮಕೂರು)	–	–
11	8	ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮೈಸೂರು	–	–
12	9	ಅಂಚೆ ಸೇವಾ ಚೀಟಿ ವಿವರ	–	–
13	10	ಸಹಾಯಕ ಕೃಷಿ ನಿರ್ದೇಶಕರು (ಕಾಡಾ) ತುಮಕೂರು	–	–
14	11	ಅಂಚೆ ಸೇವಾ ಚೀಟಿ ವಿವರಗಳು	–	–
15	12	ಕಾಡಾ ಕೇಂದ್ರ ಕಛೇರಿಯ ಸಾಮಾನ್ಯ ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ	–	–
16	13	ಅಳತೆ ಪುಸ್ತಕಗಳ (ಎಂ.ಬಿ) ದಾಸ್ತಾನಿನ ವಿವರ	–	–
17	14	ಧನಾದೇಶದ ದಾಸ್ತಾನು ವಿವರದ ಬಗ್ಗೆ	–	–
18	15	ಟೆಂಡರ್ ಪುಸ್ತಕ ದಾಸ್ತಾನಿನ ಕುರಿತು	–	–
19	16	ಸಿಬ್ಬಂದಿಗಳ ಸೇವಾವಹಿಗಳ ನಿರ್ವಹಣೆ ಕುರಿತು	–	–
20	17	ಪ್ರಯಾಣ ಭತ್ಯೆ ಪಾವತಿ ಓಚರ್‌ಗಳಲ್ಲಿ ಕಂಡುಬಂದಿರುವ ನ್ಯೂನತೆಗಳು	–	–
21	18	ಹಾಜರಾತಿ ವಹಿಯ ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು	–	–
22	19	ಹೊರಗುತ್ತಿಗೆಯಡಿ ಮಾನವಸೇವೆ ಪಡೆಯಲಾಗಿದ್ದು, ಸಂಬಂಧಿಸಿದ EPF ಮತ್ತು ESI ವಂತಿಗೆಯನ್ನು ಇಲಾಖೆಗೆ ಜಮೆ ಮಾಡಿರುವ ವಿವರ ಒದಗಿಸದಿರುವುದು	46,616	–
23	20	ಹಾಜರಾತಿ ವಹಿ ಪರಿಶೀಲನೆಯಲ್ಲಿ ಸಿ.ಯು ಪ್ರಭಾಕರ್‌ರವರು ಗೈರು ಹಾಜರಾಗಿರುವ ಕುರಿತು	–	–

24	20 (ಎ)	ಎನ್.ಪಿ.ಎಸ್ ಮೊತ್ತವನ್ನು, PRAN ಸಂಖ್ಯೆ ಪಡೆದು ಸಂಬಂಧಿಸಿದ ಖಾತೆಗೆ ಜಮಾ ಮಾಡದೆ ಇರುವ ಬಗ್ಗೆ	6,58,111	–
25	21	ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ ನೌಕರರ ಇಡುಗಂಟಿನ ಪರಿಹಾರದ ಮೊತ್ತ ಪಾವತಿ ಮಾಡದಿರುವ ಬಗ್ಗೆ	–	–
26	22	ಕಾಡಾ ಪ್ರಾಧಿಕಾರದ ವಾರ್ಷಿಕ ಲೆಕ್ಕಗಳನ್ನು ನಿರ್ವಹಿಸದಿರುವುದು	–	–
27	22 (ಎ)	ಕಾಡಾ ಪ್ರಾಧಿಕಾರದ ಮಂಜೂರಾದ ಹುದ್ದೆಗಳು/ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ	–	–
28	23	ಕ್ರಿಯಾ ಯೋಜನೆ ಬಗ್ಗೆ	–	–
29	24	ಕುಂಠಿತ ಭೌತಿಕ ಸಾಧನೆ ಕುರಿತು	–	–
30	25	ಗ್ರಾಂಟ್–ಇನ್–ಎಡ್ ಬಿಲ್ಲುಗಳ ಮೂಲಕ ಬಿಡುಗಡೆ ಮಾಡಿರುವ ಅನುದಾನಕ್ಕೆ ಹೊಂದಾಣಿಕೆ ಬಿಲ್ಲುಗಳನ್ನು ಹಾಜರುಪಡಿಸದಿರುವುದು	15,61,575	–
31	26	ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿದ ಮುಂಗಡ ಹಣಕ್ಕೆ ಎನ್.ಡಿ.ಸಿ ಲೆಕ್ಕಗಳನ್ನು ಹೊಂದಾಣಿಕೆಯಾಗದಿರುವುದು	18,95,972	–
32	27	ಕಾಮಗಾರಿಯನ್ನು ರದ್ದುಪಡಿಸಲಾಗಿದ್ದು, ನಿಯಮಾನುಸಾರ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ವಿವರಗಳನ್ನು ಹಾಜರುಪಡಿಸದಿರುವುದು	–	22,125
33	28	ಗುತ್ತಿಗೆದಾರರ ಕಾಮಗಾರಿ ಬಿಲ್ಲುಗಳಲ್ಲಿ Shrinkage ಪ್ರಮಾಣ ಹಾಗೂ Royalty ಮೊತ್ತವನ್ನು ಕಡಿಮೆ ಕಟಾಯಿಸಿರುವುದು (1,13,015 + 2,77,774)	–	3,90,789
34	29	ವಿಚಾರ ಸಂಕಿರಣದಲ್ಲಿ ಭಾಗವಹಿಸಿರುವ ಪೂರ್ಣ ಪ್ರಮಾಣದ ಓಚರ್ಸ್‌ಗಳನ್ನು ಹಾಜರುಪಡಿಸದಿರುವುದು.	43,394	–
35	30	ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸಿದ್ದು, ಕುಂಠಿತ ಪ್ರಗತಿಯನ್ನು ಸಾಧಿಸಿರುವ ಕುರಿತು	–	31,332
36	31	ಹೇಮಾವತಿ, ತುಮಕೂರು ವಿಭಾಗದ ಕಾಮಗಾರಿ Improvements to road from Vadavangatta to K.Metigatta ಗೆ ಸಂಬಂಧಿಸಿದಂತೆ M.B No.1398 ಮತ್ತು ಇತರ ದಾಖಲೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿದೆ ಇರುವುದು	41,51,722	–
37	32	ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾಯಿಸಬೇಕಾದ ವಿವರಣಾ ಪಟ್ಟಿಯನ್ನು (Royalty Statement) MB ಯಲ್ಲಿ ನಮೂದಿಸಿ ದೃಢೀಕರಿಸದೆ ಇರುವುದು	–	–
38	33	ಎಂ.ಬಿ ಪುಸ್ತಕಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದೆ ಇರುವುದು	–	–
39	34	ಬಸಿಗಾಲುವೆ ಕಾಮಗಾರಿಗೆ ಸಂಬಂಧಿಸಿದಂತೆ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವ ದಾಖಲೆಗಳು ಲಭ್ಯವಿಲ್ಲದಿರುವ ಬಗ್ಗೆ	–	11,500

40	35	2016–17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ನೀರಾವರಿ ಸೌಲಭ್ಯಗಳ ಕಾಮಗಾರಿಗಳಿಗೆ Geologist ರವರ ವರದಿಗಳು ಮತ್ತು ಮುಂದುವರೆದ ಕಾಮಗಾರಿಗಳಿಗೆ ಅನುಮೋದಿತ ಆದೇಶ ಪ್ರತಿ ಲಭ್ಯವಿಲ್ಲದಿರುವುದು	55,79,000	–
41	36	ಕಾಮಗಾರಿಯ ಕಾಲಾವಧಿ ವಿಸ್ತರಣೆ ಅನುಮೋದನೆ/ಮುಂದುವರೆದ ಕಾಮಗಾರಿ ಆಯವ್ಯಯ ಅನುಮೋದನೆ ಹಾಗೂ ಕಾಮಗಾರಿ ಪರಿಷ್ಕೃತ ಅಂದಾಜು ಅನುಮೋದನೆ ಪ್ರತಿ ಒದಗಿಸುವ ಕುರಿತು	8,56,760	–
42	37	ಕಾಮಗಾರಿಯಲ್ಲಿ ಉಂಟಾಗಿರುವ ಹೆಚ್ಚುವರಿ ಮೊತ್ತಕ್ಕೆ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದಿರುವುದು	9,63,057	–
43	38	ನಬಾರ್ಡ್ ಕಾಮಗಾರಿ MJ–19009ಗೆ ಸಂಬಂಧಿಸದಿಂತೆ ಮಂಜೂರಾದ ಮೊತ್ತದ ಅಂದಾಜಿಗಿಂತ ಕಡಿಮೆ ಕಾಮಗಾರಿ ಪೂರ್ಣಗೊಳಿಸಿರುವುದು	–	–
44	39	ಎಫ್.ಎಸ್.ಡಿ. ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸದಿರುವುದು	–	–
45	40	ಇ.ಎಂ.ಡಿ ವಹಿಯನ್ನು ಪೂರ್ಣವಾಗಿ ನಿರ್ವಹಿಸದಿರುವುದು	–	–
46	41	ಕೊಳವೆ ಬಾವಿ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿ ಬಿಲ್ಲುಗಳಲ್ಲಿ ವಿದ್ಯುತ್ ಸರಬರಾಜು ನೀಡಲಾಗಿರುವ ದೃಢೀಕರಣ ಪತ್ರ ಲಭ್ಯವಿಲ್ಲದಿರುವುದು	1,68,000	–
47	42	ನಬಾರ್ಡ್ ಕಾಮಗಾರಿ ಎಂ.ಜೆ–19013 ಕಾಮಗಾರಿಗೆ ಸಂಬಂಧಿಸಿದಂತೆ ಇ.ಎಂ.ಡಿ ವಿವರ ಹಾಜರುಪಡಿಸದಿರುವುದು	–	–
48	43	2016–17ನೇ ಸಾಲಿನ ಬೆಳೆ ಅಳವಡಿಕೆ ಪ್ರತ್ಯಕ್ಷತೆ ಬೆಳೆಗಳ ಬಗ್ಗೆ ನಾಮ ಫಲಕಗಳನ್ನು ಅಳವಡಿಸಲು ನಾಮಫಲಕ ಖರೀದಿಗಾಗಿ ಕೊಟೇಶನ್ ಆಹ್ವಾನಿಸದಿರುವ ಕುರಿತು	13,650	–
49	44	ಆಸ್ತಿ ತೆರಿಗೆ ಪಾವತಿಸಿಲ್ಲದಿರುವುದು	–	–
50	45	Center for Research Consultancy (NTE), Mysore ಸಂಸ್ಥೆಗೆ ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದರ ಕುರಿತು	–	4,600
51	46	Hydra Technical Consultancy service ಸಂಸ್ಥೆಯ ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸಿ ವಸೂಲಾತಿ ಮಾಡುವ ಬಗ್ಗೆ	–	13,985
52	47	ಕಾಡಾ ಕಚೇರಿ ವ್ಯಾಪ್ತಿಯ ನಂ.1 ತುಮಕೂರು ವಿಭಾಗಕ್ಕೆ ಸಂಬಂಧಿಸಿದ ಕಾಮಗಾರಿ ಟೆಂಡರ್ ಕಡತಗಳ ಪರಿಶೀಲನೆಯಲ್ಲಿ ಕಂಡುಬಂದಿರುವ ನ್ಯೂನತೆಗಳು	–	–
53	48	2016–17ನೇ ಸಾಲಿನ ಲೆಕ್ಕ ತಪಾಸಣೆಗೆ ಕಾಮಗಾರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕಗಳನ್ನು ಹಾಜರುಪಡಿಸದಿರುವುದು	71,91,741	–
54	49	ನಿರ್ದಿಷ್ಟ ಭೌತಿಕ ಹಾಗೂ ಆರ್ಥಿಕ ಪ್ರಗತಿಯಲ್ಲಿ ಸಾಧಿಸದಿರುವ ಅಥವಾ Short Progress ಕುರಿತು	–	2,04,926

55	50	ಟೆಂಡರ್ ಕರಾರು ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಕಡಿಮೆ ಮೊತ್ತದ Stamp Paperನ್ನು ಖರೀದಿಸಿರುವುದು	–	2,100
56	51	ನಬಾರ್ಡ್–17ರ ಕಾಮಗಾರಿಗೆ ಸಂಬಂಧಿಸಿದಂತೆ ಅನುಮೋದಿತ ಕಾಮಗಾರಿ ಅವಧಿ ವಿಸ್ತರಣೆ (Extension of the Intended Completion Date) ಆದೇಶವನ್ನು ಹಾಜರುಪಡಿಸದಿರುವ ಕುರಿತು	–	–
57	52	ವಿವಿಧ ಕಾಮಗಾರಿಗಳಿಗಾಗಿ ಕೈಗೊಂಡ ಟೆಂಡರ್ ಪ್ರಕ್ರಿಯೆಯಲ್ಲಿನ ಟೆಂಡರ್ ಇಂಡೆಂಟ್ ಸಂ.(1) 346 (2) 162 (3) 674 (4) 584 (5) 601 ಮತ್ತು (6) 589 ಗಳಲ್ಲಿನ ಲೋಪದೋಷಗಳ ಕುರಿತು	–	–
58	53	ಕಾರ್ಯಪಾಲಕ ಅಭಿಯಂತರರು, ನಂ–1 ತುಮಕೂರು ವಿಭಾಗದ ಕಾಮಗಾರಿಗಳ ಟೆಂಡರ್ ಕಡತ/ಇಂ.ಎಂ.ಡಿ/ ಕ್ರಿಯಾಯೋಜನೆ ವಿವರಗಳನ್ನು ಲೆಕ್ಕತಪಾಸಣೆಗೆ ಒದಗಿಸದಿರುವುದು	59,88,544	–
		ಒಟ್ಟು	**2,91,18,142**	**6,81,357**

ಅಪರ ನಿರ್ದೇಶಕರು (ಅಧಿಕ ಪ್ರಭಾ)
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಛೇರಿ ಮೈಸೂರು ವಿಭಾಗ, ಮೈಸೂರು.

2016–17ನೇ ಸಾಲಿನ ಕಾಡಾ ಕಾವೇರಿ ಜಲಾನಯನ ಯೋಜನೆಗಳು, ಮೈಸೂರು ಕಛೇರಿಯ ಲೆಕ್ಕತಪಾಸಣಾ ವರದಿ

ಸಾಮಾನ್ಯ ಮಾಹಿತಿ:

ಲೆಕ್ಕ ತಪಾಸಣಾ ಸಂಸ್ಥೆಯ ಹೆಸರು	ಆಡಳಿತಾಧಿಕಾರಿಗಳು, ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ (ಕಾಡಾ), ಕಾವೇರಿ ಜಲಾನಯನ ಯೋಜನೆಗಳು, ಮೈಸೂರು.
ಲೆಕ್ಕ ತಪಾಸಣೆ ವರ್ಷ	2016–17 01.04.2016 ರಿಂದ 31.03.2017
ಲೆಕ್ಕ ಪರಿಶೋಧನಾ ತಂಡದ ಹೆಸರು ಮತ್ತು ಪದನಾಮ	1. ಶ್ರೀಮತಿ ಬಿ.ಎನ್. ಸುಮಿತ್ರ, ಲೆಕ್ಕಪರಿಶೋಧನಾಧಿಕಾರಿ 2. ಶ್ರೀ ಎನ್.ಬಿ.ಸುಧಾಕರ್, ಲೆಕ್ಕಾಧೀಕ್ಷಕರು 3. ಶ್ರೀಮತಿ ಸಿ.ನಿರ್ಮಲಕುಮಾರಿ, ಲೆಕ್ಕಾಧೀಕ್ಷಕರು 4. ಶ್ರೀ ಕೃಷ್ಣ, ಲೆಕ್ಕಪರಿಶೋಧಕರು 5. ಶ್ರೀಮತಿ ಸೌಮ್ಯ.ಹೆಚ್.ಎಸ್, ಲೆಕ್ಕಪರಿಶೋಧಕರು
ಲೆಕ್ಕಪರಿಶೋಧನೆಯ ಪ್ರಾರಂಭ ದಿನಾಂಕ	19.06.2018
ಲೆಕ್ಕಪರಿಶೋಧನೆಯ ಮುಕ್ತಾಯ ದಿನಾಂಕ	07.09.2018
ಲೆಕ್ಕಪರಿಶೋಧನೆಗಾಗಿ ಉಪಯೋಗಿಸಲಾದ ಮಾನವದಿನಗಳು	254 ಏಕ ಮಾನವ ದಿನಗಳು
ಕರಡು ವರದಿಯ ಪುನರ್ ಪರಿಶೀಲನೆಯ ಅಧಿಕಾರಿಗಳ ಹೆಸರು ಮತ್ತು ಪದನಾಮ	ಶ್ರೀ.ಡಿ.ಆರ್. ರಾಮಚಂದ್ರಯ್ಯ, ಕೆ.ಎಸ್.ಎ.ಎಸ್ ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ ಮೈಸೂರು ವಿಭಾಗ, ಮೈಸೂರು.
ಕರಡು ವರದಿಯ ಪುನರ್ ಪರಿಶೀಲಿಸಿದ ದಿನಾಂಕ	24.09.2018
ಕಛೇರಿ ಆಡಳಿತ ವರ್ಗದವರ ವಿವರಗಳು	**1) ಆಡಳಿತಾಧಿಕಾರಿಗಳು** 1. ಶ್ರೀ ಬಿ. ಶಿವಶಂಕರ್ (ಪ್ರ) ದಿ:01.04.2016 ರಿಂದ 04.03.2017 2. ಶ್ರೀ ಸೋಮಸುಂದರ್ (ಪ್ರ) ದಿ:04.03.2017 ರಿಂದ 31.03.2017 **2) ಭೂ ಅಭಿವೃದ್ಧಿ ಅಧಿಕಾರಿ (ಕೃಷಿ)** 1. ಎನ್.ತಿಮ್ಮರಾಜು (ಪ್ರ) ದಿ:01.04.2016 ರಿಂದ 09.08.2016 2. ಡಾ. ಎಂ. ಮಹಂತೇಶಪ್ಪ ದಿ:09.08.2016 ರಿಂದ 31.03.2017 **3) ಭೂ ಅಭಿವೃದ್ಧಿ ಅಧಿಕಾರಿಗಳು (ಇಂಜಿನಿಯರಿಂಗ್)** ಬಿ. ಸೋಮಸುಂದರ್, ದಿ:01.04.2016 ರಿಂದ 31.03.2017 **4) ಭೂ ಅಭಿವೃದ್ಧಿ ಅಧಿಕಾರಿಗಳು (ಸಹಕಾರ)** 1. ಶ್ರೀ.ಬಿ. ನಾಗರಾಜು, ದಿ:01.04.2016 ರಿಂದ 03.08.2016 2. ಡಿ.ಸೋಮಸುಂದರ್ (ಪ್ರ) ದಿ:04.08.2016 ರಿಂದ 23.09.2016 3. ಕೆ.ಎಂ.ಶಿವಕುಮಾರಸ್ವಾಮಿ ದಿ:23.09.2016 ರಿಂದ 19.11.2016 4. ಡಾ. ಎಂ. ಮಹಂತೇಶಪ್ಪ ದಿ:20.11.2016 ರಿಂದ 31.03.2017 **5) ಉಪ–ಆಡಳಿತಾಧಿಕಾರಿಗಳು** ರೂಪ.ಬಿ.ಆರ್ ದಿ:01.04.2016 ರಿಂದ 31.03.2017

	6) ಮುಖ್ಯ ಲೆಕ್ಕಾಧಿಕಾರಿಗಳು 1. ಶ್ರೀಮತಿ ಮಂಜುಳ.ಎಸ್ ದಿ:01.04.2016 ರಿಂದ 30.06.2016 2. ರೂಪ.ಬಿ.ಆರ್ (ಪ್ರ) ದಿ:30.06.2016 ರಿಂದ 24.08.2016 3. ಪಿ.ರವಿಕುಮಾರ್ ದಿ:25.08.2016 ರಿಂದ 06.02.2017 4. ಹೆಚ್.ವಿ.ಶ್ವೇತಾ ದಿ:06.02.2017 ರಿಂದ 31.03.2017 **7) ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಕೇಂದ್ರಸ್ಥಾನ)** ಅರ್ಚನ.ಡಿ ದಿ:01.04.2016 ರಿಂದ 31.03.2017 **8) ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರಸ್ಥಾನ)** ಎನ್.ತಿಮ್ಮರಾಜು (ಪ್ರ) ದಿ:01.04.2016 ರಿಂದ 31.03.2017 **9) ಸಹಕಾರ ಸಂಘಗಳ ಸಹಾಯಕರು, ನಿಬಂಧಕರು (ಕೇಂದ್ರಸ್ಥಾನ)** 1. ರಾಜು.ಕೆ.ಆರ್. ದಿ:01.04.2016 ರಿಂದ 19.09.2016 2. ಟಿ.ಆರ್.ರೇಖಾ ದಿ:19.09.2016 ರಿಂದ 31.03.2017

ಭಾಗ–1

1. ಹಿಂದಿನ ಸಾಲುಗಳ ಲೆಕ್ಕ ತಪಾಸಣಾ ವರದಿಗಳಿಗೆ ಅನುಸರಣಾ ವರದಿಗಳನ್ನು ಪೂರ್ಣವಾಗಿ ಸಲ್ಲಿಸದಿರುವ ಬಗ್ಗೆ :

ಕಾಡಾ ಪ್ರಾಧಿಕಾರ ಮೈಸೂರು ಇದರ 2016–17ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕರ್ನಾಟಕ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1980ರ ಅನುಚ್ಛೇದ 24(2)ರ ಅನ್ವಯ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದು, ಸದರಿ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಹಾಗೂ ಹಿಂದಿನ ಸಾಲುಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಕಂಡಿಕೆವಾರು ಅನುಸರಣಾ ವರದಿಗಳನ್ನು ಪೂರ್ಣವಾಗಿ ನೀಡದಿರುವುದು ಕಂಡುಬಂದಿದೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಆಡಿಟ್ ವರದಿಯಲ್ಲಿ ಆಕ್ಷೇಪಣೆಯ ಮೊತ್ತ ಹಾಗೂ ವಸೂಲಾತಿಯ ಮೊತ್ತವು ಹೆಚ್ಚಿಗೆಯಾಗಿದ್ದು, ಸಕಾಲದಲ್ಲಿ ಆಡಿಟ್ ವರದಿಗಳಿಗೆ ಅನುಸರಣಾ ವರದಿಗಳನ್ನು ಸಲ್ಲಿಸದೆ ಪ್ರಾಧಿಕಾರಕ್ಕೆ ನಷ್ಟ ಉಂಟಾಗುವ ಸಾಧ್ಯತೆಯಿದ್ದು, ಬಾಕಿ ಉಳಿದಿರುವ ಎಲ್ಲಾ ಸಾಲುಗಳ ಆಡಿಟ್ ವರದಿಗಳಿಗೆ ಕಂಡಿಕೆವಾರು ಅನುಸರಣಾ ವರದಿಯನ್ನು ಸಲ್ಲಿಸಲು ಕ್ರಮವಹಿಸಲು ಸೂಚಿಸಿದೆ.

1992–93 ರಿಂದ 2016–17ನೇ ಸಾಲಿನವರೆಗೆ ಇತ್ಯಥವಾಗದೆ ಬಾಕಿ ಇರುವ ರೂ.39,17,50,297/–ಗಳ ಆಕ್ಷೇಪಣೆ ಹಾಗೂ ರೂ.1,11,31,931/–ಗಳ ವಸೂಲಾತಿಯ ಮೊತ್ತಕ್ಕೆ ಸೂಕ್ತ ದಾಖಲಾತಿಗಳೊಂದಿಗೆ (ದೃಢೀಕೃತ) ಕಂಡಿಕೆವಾರು ಅನುಪಾಲನಾ ವರದಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿ ತೀರುವಳಿ ಪಡೆಯಲು ಸೂಚಿಸಲಾಗಿದೆ. ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿಯ ವಿವರಗಳನ್ನು **ಅನುಬಂಧ–1ರಲ್ಲಿ** ನೀಡಲಾಗಿದೆ.

ಭಾಗ–2

2. ಆಯವ್ಯಯದ ಬಗ್ಗೆ:–

2016–17ನೇ ಸಾಲಿನಲ್ಲಿ ಕಾಡಾ ಪ್ರಾಧಿಕಾರದ ಆಯವ್ಯಯವನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, (ಕಾಡಾ) ಬೆಂಗಳೂರು ರವರು ಪತ್ರದ ಸಂಖ್ಯೆ–ಜ.ಸಂ 249/ಸಿಎಂ/2016 ದಿನಾಂಕ:24.08.2016 ರಲ್ಲಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಲ್ಲಿನ ಆಯವ್ಯಯಕ್ಕೆ ಅನುಮೋದನೆಯನ್ನು ಪಡೆಯಲಾಗಿದೆ.

ಲೆಕ್ಕ ಶೀರ್ಷಿಕೆ	ಆಯವ್ಯಯ
2705	2123.00 ಲಕ್ಷ
4705	5500.00 ಲಕ್ಷ
SDP-SCP	320.00 ಲಕ್ಷ
SSDP-TSP	125.00 ಲಕ್ಷ
ನಬಾರ್ಡ್	1700.00 ಲಕ್ಷ

3. ಆರ್ಥಿಕ ಪರಿಸ್ಥಿತಿ ಬಗ್ಗೆ :–

2016–17ನೇ ಸಾಲಿನಲ್ಲಿ ಕಾಡಾ ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಲಾಗಿ ಸದರಿ ಪ್ರಾಧಿಕಾರವು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ಇಲ್ಲಿನ ಉಳಿತಾಯ ಖಾತೆ ಸಂಖ್ಯೆ:54005582673ರಲ್ಲಿ ಆರ್ಥಿಕ ವ್ಯವಹಾರಗಳನ್ನು ನಡೆಸಲಾಗಿತ್ತಿದೆ. ಇದರಲ್ಲಿರುವಂತೆ ಹಾಗೂ ನಗದು ಪುಸ್ತಕದಲ್ಲಿನ ವಿವರಗಳಂತೆ ಆರ್ಥಿಕ ಪರಿಸ್ಥಿತಿಯು ಕೆಳಗಿನಂತಿದೆ.

ದಿನಾಂಕ:31.03.2017ರ ಅಂತ್ಯಕ್ಕೆ ಅಂತಿಮ ಶಿಲ್ಕು ರೂ.369797736.70 ಗಳಾಗಿದ್ದು, ಬ್ಯಾಂಕ್ ಸ್ಟೇಟ್‌ಮೆಂಟ್ ಪ್ರಕಾರ ರೂ.226013379.70 ಆಗಿರುತ್ತದೆ. ವ್ಯತ್ಯಾಸ ಇರುವ ರೂ.143784357.00ಗಳಿಗೆ ಲೆಕ್ಕ ಸಮನ್ವಯಗೊಳಿಸಿ ಸೂಕ್ತ ವಿವರಣೆ ನೀಡುವುದು. ನಗದಾನಗದ ಧನಾದೇಶಗಳ ವಿವರಗಳನ್ನು **ಅನುಬಂಧ – 2ರಲ್ಲಿ ನೀಡಿದೆ.**

ದಿನಾಂಕ:01.04.2016ರ ಪ್ರಾರಂಭ ಶಿಲ್ಕು	163187736.70
2016–17ನೇ ಸಾಲಿಗೆ ಸ್ವೀಕೃತಿ	699130302.00
ಒಟ್ಟು	**862318038.70**
ವೆಚ್ಚ	492520302.00
ದಿನಾಂಕ:31.03.2017ರ ಅಂತಿಮ ಶಿಲ್ಕು	369797736.70
ಬ್ಯಾಂಕ್ ಸ್ಟೇಟ್‌ಮೆಂಟ್ ಪ್ರಕಾರ ಅಂತಿಮ ಶಿಲ್ಕು	226013379.70
ವ್ಯತ್ಯಾಸ	143784357.00
ಲೆಕ್ಕ ಸಮನ್ವಯವಾಗದ ಬಾಬ್ತು	2033494.00
ಇತರೆ	573193.00
ದಿನಾಂಕ:31.03.2017ಕ್ಕೆ ನಗದಾಗದ ಧನಾದೇಶಗಳು	141177670.00

ನಗದಾಗದ ಧನಾದೇಶಗಳಲ್ಲಿ ಸುಮಾರು 4 ವರ್ಷಗಳ ಹಿಂದಿನ ಸಾಲಿನದ್ದಾಗಿದ್ದು, ಧನಾದೇಶಗಳನ್ನು ರದ್ದುಪಡಿಸಿ ಸ್ವೀಕೃತಿ ಲೆಕ್ಕಕ್ಕೆ ತೆಗೆದುಕೊಂಡು ಲೆಕ್ಕ ಸಮನ್ವಯಗೊಳಿಸಿ ವರದಿಯನ್ನು ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ.

3 (ಎ). ಆರ್ಥಿಕ ಪ್ರತ್ಯಾಧಿಕಾರದ ಅನುಮೋದನೆಯ ಆದೇಶದ ಪ್ರತಿಯನ್ನು ಹಾಜರುಪಡಿಸದಿರುವುದು (Deligation of Financial power) :–

ಕಾಡಾ ಪ್ರಾಧಿಕಾರದ 2016–17ನೇ ಸಾಲಿನ ಲೆಕ್ಕತನಿಖಾ ಸಂದರ್ಭದಲ್ಲಿ ಪ್ರಾಧಿಕಾರದ ಶಾಸನಬದ್ಧ ಅಧಿಕಾರಿಗಳಾದ ಆಡಳಿತಾಧಿಕಾರಿಗಳು, ಉಪ ಆಡಳಿತಾಧಿಕಾರಿಗಳು, ಕಾರ್ಯಪಾಲಕ ಅಭಿಯಂತರರುಗಳು (ನಂ.1 ಮತ್ತು ನಂ.2 ವಿಭಾಗ), ಮುಖ್ಯ ಲೆಕ್ಕಾಧಿಕಾರಿಗಳು, ಭೂ ಅಭಿವೃದ್ಧಿ ಅಧಿಕಾರಿಗಳು (ಇಂಜಿನಿಯರಿಂಗ್), (ಸಹಕಾರ), (ಕೃಷಿ) ರವರುಗಳ ಆರ್ಥಿಕ ಪ್ರತ್ಯಾಧಿಕಾರದ ಅನುಮೋದಿತ ಆದೇಶದ ಪ್ರತಿಯನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ. ಪ್ರಾಧಿಕಾರದಲ್ಲಿ 1983ರ ಸಾಲಿನ ಆದೇಶ ಪ್ರತಿ ಲಭ್ಯವಿದ್ದು, ಪರಿಷ್ಕೃತ ಆದೇಶ ಪ್ರತಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ.

3 (ಬಿ) ಅನುದಾನದ ಬಗ್ಗೆ :–

ಕಾಡಾ ಕಛೇರಿಯ 2016–17ನೇ ಸಾಲಿಗೆ ಲೆಕ್ಕಶೀರ್ಷಿಕೆ 2705 ಮತ್ತು 4705ರಡಿ ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರ ಕೆಳಕಂಡಂತಿದೆ.

ಬಿಡುಗಡೆಯಾದ ಅನುದಾನ	43,94,64,000
ಒಟ್ಟಾರೆ ವೆಚ್ಚ	37,52,69,962
ಉಳಿಕೆ	6,41,94,038

ಕಾಡಾ ಕಛೇರಿಯ 2016–17ನೇ ಸಾಲಿನ ಲೆಕ್ಕ ತನಿಖಾ ಸಂದರ್ಭದಲ್ಲಿ 2016–17ನೇ ಸಾಲಿನ ಏಪ್ರಿಲ್–2016ರ ಮಾಹೆಯ ಬ್ಯಾಂಕ್ ಸ್ಟೋಲ್‌ನ್ನು ಪರಿಶೀಲಿಸಿದಾಗ ದಿನಾಂಕ:19.04.2016 ರಂದು ಸಹಾಯಾನುದಾನ ಸರ್ಕಾರದಿಂದ ರೂ.13,94,00,000/–ಗಳು 2015–16ನೆ ಸಾಲಿನ ಅನುದಾನದ 4/2016 ಮಾಹೆಗೆ ಜಮೆ ಆಗಿದ್ದು, ಅದರಲ್ಲಿ ರೂ.34106700/–ಗಳಿಗೆ ಧನಾದೇಶ ವಿತರಿಸಿದ್ದು, ಉಳಿಕೆ ಮೊತ್ತಕ್ಕೆ ರೂ.10,52,93,300/–ಗಳಿಗೆ ವೆಚ್ಚ ಭರಿಸಿರುವ ಅಥವಾ ಸರ್ಕಾರಕ್ಕೆ ಆಧ್ಯರ್ಪಣೆ ಮಾಡಿರುವ ಬಗ್ಗೆ ವಿವರವನ್ನು ಲೆಕ್ಕ ತನಿಖೆಗೆ ಒದಗಿಸಲು ಕೋರಿ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:7/29.06.2018ರಲ್ಲಿ ತಿಳಿಸಲಾಗಿದ್ದು, ಅನುಪಾಲನಾ ವರದಿಯಲ್ಲಿ ಲೆಕ್ಕ ಶೀರ್ಷಿಕೆ 4705 ರಡಿ ಸದರಿ ಅನುದಾನವು ವೆಚ್ಚವಾಗಿದ್ದು, ಉಳಿದಿರುವ ಮೊತ್ತವನ್ನು ಸರ್ಕಾರಕ್ಕೆ ಆಧ್ಯರ್ಪಣೆ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

4. ನಗದು ಪುಸ್ತಕದ ಬಗ್ಗೆ:–

ಕಾಡಾ ಪ್ರಾಧಿಕಾರದ ನಗದು ಪುಸ್ತಕವನ್ನು ಪರಿಶೀಲಿಸಲಾಗಿ 2016–17ನೇ ಸಾಲಿಗೆ ದಿನಾಂಕ31.03.2017ರ ಅಂತ್ಯಕ್ಕೆ ವಿವರಗಳು ಕೆಳಕಂಡಂತಿದೆ.

ದಿನಾಂಕ:31.03.2017ರ ಅಂತ್ಯಕ್ಕೆ ನಗದುಪುಸ್ತಕದ ಪ್ರಕಾರ	8,47,71,199
ನಗದಾಗದೇ ಇರುವ ಧನಾದೇಶಗಳ ವಿವರ	14,11,77,670
ಒಟ್ಟು	**22,59,48,869**
	(–)64,511
	22,58,84,358
ದಿನಾಂಕ:31.03.2017ರ ಅಂತ್ಯಕ್ಕೆ ಬ್ಯಾಂಕಿನ ಅಂತಿಮ ಶಿಲ್ಕು	22,60,13,360
ವ್ಯತ್ಯಾಸ	**1,29,022**

ಹಾಗೂ ದಿನಾಂಕ:19.06.2018 ರಂದು ನಗದು ಪುಸ್ತಕದ ಅಂತಿಮ ಶಿಲ್ಕಿನ ವಿವರಗಳನ್ನು ಪರಿಶೀಲಿಸಲಾಗಿ ವಿವರ ಕೆಳಕಂಡಂತಿದೆ:

ಖಾಯಂ ಮುಂಗಡ	10,000
ಬ್ಯಾಂಕ್‌ನ ಶಿಲ್ಕು	16,87,93,535
EMD/FSD	144,16,877
Advance (ಮುಂಗಡ)	7,43,561
	18,39,63,973

ಮೇಲ್ಕಂಡ ವಿವರಗಳನ್ನು ಪರಿಶೀಲಿಸಿದಾಗ ನಗದು ಪುಸ್ತದಲ್ಲಿನ ಬ್ಯಾಂಕ್ ಅಂತಿಮ ಶಿಲ್ಕಿಗೂ, ಬ್ಯಾಂಕ್ ಪಾಸ್‌ಶೀಟ್‌ಗಳಲ್ಲಿನ ಅಂತಿಮ ಶಿಲ್ಕಿಗೂ ವ್ಯತ್ಯಾಸವಿದ್ದು, ಲೆಕ್ಕಸಮನ್ವಯಗೊಳಿಸಿ ಬ್ಯಾಂಕ್ ಲೆಕ್ಕಗಳೊಂದಿಗೆ ತಾಳೆ ಮಾಡಿ ನಿಯಮಾನುಸಾರ ನಗದು ಪುಸ್ತಕವನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಲಾಗಿದೆ.

5. ಅಂಚೆ ಸೇವಾ ಚೀಟಿ ವಿವರಗಳು: – (ಆಡಳಿತಾಧಿಕಾರಿಗಳ ಕಛೇರಿ)

(ಎ) ಭೌತಿಕ ಪರಿಶೀಲನೆ:

ದಿನಾಂಕ:19.06.2018 ರಂದು ಅಂಚೆ ಸೇವಾ ಚೀಟಿಯ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.2544/–ಗಳ ಮೌಲ್ಯದ ಅಂಚೆ ಸೇವಾ ಚೀಟಿಗಳಿದ್ದು ತಾಳೆ ಹೊಂದಿರುತ್ತದೆ. ವಿವರ ಕೆಳಕಂಡಂತಿದೆ:

ಕ್ರ.ಸಂ	ರೂ.	ಸಂಖ್ಯೆ	ಮೊತ್ತ
01	10.00	171	1710
02	5.00	93	465
03	1.00	369	369
		ಒಟ್ಟು	2544

(ಬಿ). ಖರೀದಿ ಮತ್ತು ಖರ್ಚಿನ ವಿವರ:–

2016–17ನೇ ಸಾಲಿನಲ್ಲಿ ಸ್ವೀಕರಿಸಿದ ಮತ್ತು ಖರ್ಚಾದ ಅಂಚೆ ಸೇವಾ ಚೀಟಿಗಳ ವಿವರ ಈ ಕೆಳಕಂಡಂತಿದೆ:

ದಿನಾಂಕ:01.04.2016 ರ ಪ್ರಾರಂಭ ಶಿಲ್ಕು	28,137
ಸ್ವೀಕೃತಿ	40,000
ಒಟ್ಟು	68,137
ಖರ್ಚು	45,805
ದಿನಾಂಕ:31.03.2017 ರ ಅಂತಿಮ ಶಿಲ್ಕು	22,332

6. ಅಂಚೆ ಸೇವಾ ಚೀಟಿ ವಿವರಗಳು: (A. E.E No–2 ವಿಭಾಗ) (ಮೈಸೂರು)

(ಎ) ಭೌತಿಕ ಪರಿಶೀಲನೆ:–

ದಿನಾಂಕ:31.07.2018 ರಂದು ಅಂಚೆ ಸೇವಾ ಚೀಟಿಯ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.520/– ಮೌಲ್ಯದ ಅಂಚೆ ಸೇವಾ ಚೀಟಿಗಳಿದ್ದು, ತಾಳೆ ಹೊಂದಿರುತ್ತದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ರೂ.	ಸಂಖ್ಯೆ	ಮೊತ್ತ
1	5.00	104	520

(ಬಿ). ಖರೀದಿ ಮತ್ತು ಖರ್ಚಿನ ವಿವರ:–

2016–17ನೇ ಸಾಲಿನಲ್ಲಿ ಸ್ವೀಕರಿಸಿದ ಮತ್ತು ಖರ್ಚಾದ ಅಂಚೆ ಸೇವಾ ಚೀಟಿಗಳ ವಿವರ ಈ ಕೆಳಕಂಡಂತಿದೆ:

ದಿನಾಂಕ:01.04.2016 ರ ಪ್ರಾರಂಭ ಶಿಲ್ಕು	207
ಸ್ವೀಕೃತಿ	1500
ಒಟ್ಟು	1707
ಖರ್ಚು	1037
ದಿನಾಂಕ:31.03.2017 ರ ಅಂತಿಮ ಶಿಲ್ಕು	670

7. ಅಂಚೆ ಸೇವಾ ಚೀಟಿ ವಿವರಗಳು:– (E.E No–1 ತುಮಕೂರು)

(ಎ) ಭೌತಿಕ ಪರಿಶೀಲನೆ:–

2016–17ನೇ ಸಾಲಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ದಿನಾಂಕ:31.07.2018 ರಂದು ಅಂಚೆ ಸೇವಾ ಚೀಟಿಯ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.1695/–ಗಳ ಮೌಲ್ಯದ ಅಂಚೆ ಸೇವಾ ಚೀಟಿಗಳಿದ್ದು, ತಾಳೆ ಹೊಂದಿರುತ್ತದೆ. ವಿವರ ಕೆಳಕಂಡಂತಿದೆ

ಕ್ರ.ಸಂ	ರೂ.	ಸಂಖ್ಯೆ	ಮೊತ್ತ
1	10.00	100	1000.00
2	5.00	91	455.00
3	1.00	240	240.00
		ಒಟ್ಟು	1,695.00

(ಬಿ). ಖರೀದಿ ಮತ್ತು ಖರ್ಚಿನ ವಿವರ:–

2016–17ನೇ ಸಾಲಿನಲ್ಲಿ ಖರೀದಿಸಲಾದ ಮತ್ತು ಖರ್ಚಾದ ಅಂಚೆ ಸೇವಾ ಚೀಟಿಗಳ ವಿವರ ಕೆಳಕಂಡಂತಿದೆ:

ದಿನಾಂಕ:01.04.2016 ರ ಪ್ರಾರಂಭ ಶಿಲ್ಕು	2003.00
2016–17ನೇ ಸಾಲಿನಲ್ಲಿ ಖರೀದಿ	4000.00
ಒಟ್ಟು	6003.00
ಖರ್ಚು	4894.00
ದಿನಾಂಕ:31.03.2017 ರ ಅಂತ್ಯಕ್ಕೆ ಅಂತಿಮ ಶಿಲ್ಕು	1109.00

7(ಎ) ಅಂಚೆ ಸೇವಾ ಚೀಟಿ ವಿವರಗಳು: (A. E.E No–1 ವಿಭಾಗ ತುಮಕೂರು)

(ಎ) ಭೌತಿಕ ಪರಿಶೀಲನೆ:–

2016–17ನೇ ಸಾಲಿನ ಲೆಕ್ಕಪರಿಶೋಧನಾ ಸಂದರ್ಭದಲ್ಲಿ ದಿನಾಂಕ:31.07.2018 ರಂದು ಅಂಚೆ ಸೇವಾ ಚೀಟಿಯ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.1383/–ಗಳ ಮೌಲ್ಯದ ಅಂಚೆ ಸೇವಾ ಚೀಟಿಗಳಿದ್ದು, ತಾಳೆ ಹೊಂದಿರುತ್ತದೆ. ವಿವರ ಕೆಳಕಂಡಂತಿದೆ

ಕ್ರ.ಸಂ	ರೂ.	ಸಂಖ್ಯೆ	ಮೊತ್ತ
1	10.00	100	1000.00
2	5.00	76	380.00
3	1.00	3	3.00
		ಒಟ್ಟು	1383.00

(ಬಿ). ಖರೀದಿ ಮತ್ತು ಖರ್ಚಿನ ವಿವರ:

2016–17ನೇ ಸಾಲಿನಲ್ಲಿ ಖರೀದಿಸಲಾದ ಮತ್ತು ಖರ್ಚಾದ ಅಂಚೆ ಸೇವಾ ಚೀಟಿಗಳ ವಿವರ ಕೆಳಕಂಡಂತಿದೆ:

ದಿನಾಂಕ:01.04.2016 ರ ಪ್ರಾರಂಭ ಶಿಲ್ಕು	235.00
2016–17ನೇ ಸಾಲಿನಲ್ಲಿ ಖರೀದಿ	4525.00
ಒಟ್ಟು	4760
ಖರ್ಚು	3147.00
ದಿನಾಂಕ:31.03.2017 ರ ಅಂತ್ಯಕ್ಕೆ ಅಂತಿಮ ಶಿಲ್ಕು	1613.00

8. ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮೈಸೂರು

ಅರ್ಥಿಕ ಸ್ಥಿತಿ :–

ದಿನಾಂಕ:01.04.2016ರ ಪ್ರಾರಂಭ ಶಿಲ್ಕು	51769.79
2016–17ನೇ ಸಾಲಿಗೆ ಸ್ವೀಕೃತಿ	8431219.00
ಒಟ್ಟು	**8482988.79**
ವೆಚ್ಚ	8195451.75
ದಿನಾಂಕ:31.03.2017ರ ಅಂತಿಮ ಶಿಲ್ಕು	287537.00

ಬ್ಯಾಂಕ್‌ನ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

9. ಅಂಚೆ ಸೇವಾ ಚೀಟಿ ವಿವರ :–

(1) ದಿನಾಂಕ:07.07.2018 ರಂದು ಸ.ಕೃ.ನಿ, ಮೈಸೂರು ಉಪ ವಿಭಾಗದ ಅಂಚೆ ಸೇವಾ ಚೀಟಿಯ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.84/– ಮೌಲ್ಯದ ಅಂಚೆ ಸೇವಾ ಚೀಟಿಗಳು ಬಾಕಿ ಉಳಿದಿದ್ದು, ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ವಿವರ ಕೆಳಕಂಡಂತಿದೆ.

ರೂ.1 x 84 = 84/–

10. ಸಹಾಯಕ ಕೃಷಿ ನಿರ್ದೇಶಕರು (ಕಾಡಾ) ತುಮಕೂರು

ಆರ್ಥಿಕ ಪರಿಸ್ಥಿತಿಯ ಬಗ್ಗೆ :–

2016–17ನೇ ಸಾಲಿನಲ್ಲಿ ಸಹಾಯಕ ಕೃಷಿ ನಿರ್ದೇಶಕರು (ಕಾಡಾ) ತುಮಕೂರು ರವರ ಕಛೇರಿಯ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ ಆರ್ಥಿಕ ವ್ಯವಹಾರವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ತುಮಕೂರು ಶಾಖೆಯ (ಎಸ್.ಬಿ.ಎಂ) ಉಳಿತಾಯ ಖಾತೆ ಸಂಖ್ಯೆ:64020003580ರಲ್ಲಿ ನಡೆಸಲಾಗುತ್ತಿದೆ. ವಿವರಗಳು ಕೆಳಗಿನಂತಿದೆ.

ದಿನಾಂಕ:01.04.2016ರ ಪ್ರಾರಂಭ ಶಿಲ್ಕು	27,839
2016–17ನೇ ಸಾಲಿನ ಒಟ್ಟು ಜಮಾ	43,67,006
ಒಟ್ಟು	**43,94,845**
2016–17ರ ಸಾಲಿನ ವೆಚ್ಚ	43,90,473
ದಿನಾಂಕ:31.03.2017ರ ಅಂತಿಮ ಶಿಲ್ಕು	4,372
ಬ್ಯಾಂಕ್ ಸ್ಟೇಟ್‌ಮೆಂಟ್ ಪ್ರಕಾರ ಅಂತಿಮ ಶಿಲ್ಕು	4,372
ವ್ಯತ್ಯಾಸ	–

11) ಅಂಚೆ ಸೇವಾ ಚೀಟಿ ವಿವರಗಳು:

ದಿನಾಂಕ:25.07.2018 ರಂದು ಸ.ಕೃ.ನಿ, ತುಮಕೂರು ಕಛೇರಿಯ ಅಂಚೆ ಸೇವಾ ಚೀಟಿಯ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.491/– ಮೌಲ್ಯದ ಅಂಚೆ ಸೇವಾ ಚೀಟಿಗಳು ಬಾಕಿ ಉಳಿದಿದ್ದು, ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

ರೂ.5 x 98 = 490/–
ರೂ.1 x 1 = 1/–
ಒಟ್ಟು ರೂ. 491/–

12. ಕಾಡಾ ಕೇಂದ್ರ ಕಛೇರಿಯ ಸಾಮಾನ್ಯ ರಶೀದಿ ಪುಸ್ತಕಗಳ ದಾಸ್ತಾನು ಪರಿಶೀಲನೆ :–

2016–17ನೇ ಸಾಲಿಗೆ ಕಛೇರಿಯ ನಗದು ಶಾಖೆಯಲ್ಲಿ ಹಾಗೂ ಕೇಂದ್ರ ದಾಸ್ತಾನಿನಲ್ಲಿ ಬಳಸಲಾಗಿರುವ ಹಾಗೂ ಆಡಿಟ್ ಪ್ರಾರಂಭದ ಸಮಯದಲ್ಲಿ ಉಪಯೋಗಿಸದೆ ಬಾಕಿ ಉಳಿದಿರುವ ರಶೀದಿ ಪುಸ್ತಕಗಳ ವಿವರ ಕೆಳಕಂಡಂತಿದೆ.

ರಶೀದಿ ಪುಸ್ತಕ ಸಂಖ್ಯೆ:2129ನ್ನು ಹಿಂದಿನ ಸಾಲಿನಲ್ಲಿ ಭಾಗಶಃ ಉಪಯೋಗಿಸಲಾಗಿದ್ದು, 2016–17ನೆ ಸಾಲಿನಲ್ಲಿ ರಶೀದಿ ಸಂಖ್ಯೆ:212820/ದಿನಾಂಕ:13.04.2016 ರಿಂದ 212842/31.03.2017ರವರೆಗೆ ಭಾಗಶಃ ಉಪಯೋಗಿಸಲಾಗಿರುತ್ತದೆ.

ಉಪಯೋಗಿಸಿದ ರಶೀದಿ ಪುಸ್ತಕಗಳ ವಿವರ

ಕ್ರ.ಸಂ	ರಶೀದಿ ಪುಸ್ತಕ ಸಂಖ್ಯೆ	ರಶೀದಿ ಪುಸ್ತಕ ಕ್ರ.ಸಂ		ಷರಾ
		ಇಂದ	ವರೆಗೆ	
1	2130	212901	213000	2016–17ನೇ ಸಾಲಿಗೆ ಪೂರ್ಣವಾಗಿ ಖಾಲಿ ಇರುತ್ತದೆ.
2	2131	213001	213100	2016–17ನೇ ಸಾಲಿಗೆ ಪೂರ್ಣವಾಗಿ ಖಾಲಿ ಇರುತ್ತದೆ.
3	2132	213101	213200	2016–17ನೇ ಸಾಲಿಗೆ ಪೂರ್ಣವಾಗಿ ಖಾಲಿ ಇರುತ್ತದೆ.
4	2133	213201	213300	2016–17ನೇ ಸಾಲಿಗೆ ಪೂರ್ಣವಾಗಿ ಖಾಲಿ ಇರುತ್ತದೆ.

2016–17ನೇ ಸಾಲಿಗೆ ಕೇಂದ್ರ ದಾಸ್ತಾನಿನ ಸಾಮಾನ್ಯ ರಶೀದಿ ಪುಸ್ತಕಗಳ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಲಾಗಿ ಒಟ್ಟು 46 ಸಂಖ್ಯೆ ಸಾಮಾನ್ಯ ರಶೀದಿ ಪುಸ್ತಕಗಳು ರಶೀದಿ ಪುಸ್ತಕ ಸಂಖ್ಯೆ 3203 ರಿಂದ ರಶೀದಿ ಪುಸ್ತಕ ಸಂಖ್ಯೆ 3248 (ರಶೀದಿ ಕ್ರಮಸಂಖ್ಯೆ 320201 ರಿಂದ 324800 ರವರೆಗೆ) ದಾಸ್ತಾನಿನಲ್ಲಿದ್ದು, ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ. ವಿವರಗಳನ್ನು **ಅನುಬಂಧ– 3ರಲ್ಲಿ** ನೀಡಲಾಗಿದೆ.

13. ಅಳತೆ ಪುಸ್ತಕಗಳ (ಎಂ.ಬಿ) ದಾಸ್ತಾನಿನ ವಿವರ :–

ದಿನಾಂಕ:04.07.2018 ರಂದು ಅಳತೆ ಪುಸ್ತಕದ ದಾಸ್ತಾನು ವಹಿ ಪರಿಶೀಲಿಸಿದಾಗ ನಂ.1 ಕಾಡಾ ತುಮಕೂರು ಮತ್ತು ನಂ.2 ಕಾಡಾ ಮೈಸೂರು ವಿಭಾಗಗಳಿಗೆ ಸಹಾಯಕ ನಿರ್ದೇಶಕರು, (ತಾಂತ್ರಿಕ) ಸರ್ಕಾರಿ ವಿಭಾಗೀಯ, ಮುದ್ರಣಾಲಯ, ಸರಸ್ವತಿಪುರಂ, ಮೈಸೂರು ರವರಿಂದ ಬಿಲ್ ನಂ.039318/31.03.2017 50 ಅಳತೆ ಪುಸ್ತಕ ಸಂಖ್ಯೆ : 8485 ರಿಂದ 8500 ರವರೆಗೆ – 16 ಅಳತೆ ಪುಸ್ತಕಗಳು

8501 ರಿಂದ 8534 ರವರೆಗೆ – 34

ಒಟ್ಟು **50** ಅಳತೆ ಪುಸ್ತಕಗಳನ್ನು ಖರೀದಿಸಿ ದಿನಾಂಕ:31.03.2017 ರಂದು ದಾಸ್ತಾನಿಗೆ ತೆಗೆದುಕೊಳ್ಳಲಾಗಿದ್ದು,

1. 8485 ರಿಂದ 8494 ರವರೆಗೆ – 10 ಸಕೃನಿ, ಮೈಸೂರು
2. 8495 ರಿಂದ 8499 ರವರೆಗೆ – 5 ಕಾ.ಆ.ನಂ.2, ಮೈಸೂರು
3. 8500 ರಿಂದ 8499 ರವರೆಗೆ – 20 ಕಾ.ಅ.ನಂ.1, ತುಮಕೂರು
4. 8520 ರಿಂದ 8534 ರವರೆಗೆ – 15 ಕಾ.ಆ.ನಂ.2, ಮೈಸೂರು

ಒಟ್ಟು – **50**

50 ಅಳತೆ ಪುಸ್ತಕಗಳನ್ನು ಸಂಬಂಧಪಟ್ಟ ವಿಭಾಗಗಳಲ್ಲಿ ವಿತರಿಸಲಾಗಿರುವುದನ್ನು ಲೆಕ್ಕ ತನಿಖೆಯಲ್ಲಿ ಗಮನಿಸಿದೆ.

2015–16 ಆರಂಭಶಿಲ್ಕು	2016–17 ಖರೀದಿ	ವಿತರಣೆ	ಉಳಿಕೆ
ಇಲ್ಲ	50	50	–

14. ಧನಾದೇಶದ ದಾಸ್ತಾನು ವಿವರದ ಬಗ್ಗೆ :–

ಕಾಡಾ ಪ್ರಾಧಿಕಾರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆ ಸಂಖ್ಯೆ:54005582673 ರಲ್ಲಿ ಆರ್ಥಿಕ ವ್ಯವಹಾರಗಳನ್ನು ನಿರ್ವಹಸಲಾಗುತ್ತಿದೆ. ಸಂಬಂಧಿಸಿದ ಧನಾದೇಶಗಳ ಪುಸ್ತಕದ ವಿವರವನ್ನು ದಿನಾಂಕ:17.08.2018ರಂದು ಧನಾದೇಶ ಪುಸ್ತಕದ ದಾಸ್ತಾನು ಲೆಕ್ಕವನ್ನು ಪರಿಶೀಲಿಸಿದಾಗ ಧನಾದೇಶ ಪುಸ್ತಕದ ಕ್ರಮ ಸಂಖ್ಯೆ:76226 ರಿಂದ 76325 ರವರೆಗೆ 100 ಹಾಳೆಗಳ ಧನಾದೇಶಗಳಲ್ಲಿ ಕ್ರಮಸಂಖ್ಯೆ:76297ರವರೆಗೆ ಉಪಯೋಗಿಸಿದೆ. ಉಳಿಕೆ 76298 ರಿಂದ 76325ರವರೆಗೆ ಉಪಯೋಗಿಸದೆ ಖಾಲಿ ಉಳಿದಿರುತ್ತದೆ. ಹಾಗೂ ಧನಾದೇಶ ಪುಸ್ತಕಗಳು (1) ಕ್ರಮಸಂಖ್ಯೆ–334551 ರಿಂದ 334600ರವರೆಗೆ ಖಾಲಿ ಉಳಿದಿರುತ್ತದೆ (50 ಹಾಳೆಗಳು) (2) ಕ್ರಮಸಂಖ್ಯೆ:334601 ರಿಂದ 334650 ರವರೆಗೆ ಖಾಲಿ ಉಳಿದಿರುತ್ತದೆ. (50 ಹಾಳೆಗಳು) 2 ಧನಾದೇಶ ಪುಸ್ತಕಗಳು ಪೂರ್ಣವಾಗಿ ಖಾಲಿ ಉಳಿದಿದ್ದು, ದಾಸ್ತಾನಿನ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

15. ಟೆಂಡರ್ ಪುಸ್ತಕ ದಾಸ್ತಾನಿನ ಕುರಿತು :–

2016–17ನೇ ಸಾಲಿಗೆ ಟೆಂಡರ್ ಪುಸ್ತಕಗಳ ದಾಸ್ತಾನು ವಿವರವನ್ನು ಪರಿಶೀಲಿಸಿದಾಗ ಆರ್ಥಿಕ ವರ್ಷದ ಅಂತ್ಯಕ್ಕೆ 1000 ಟೆಂಡರ್ ಪುಸ್ತಕಗಳ ಉಳಿಕೆ ಇರುತ್ತದೆ. ದಾಸ್ತಾನಿನ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

16. ಸಿಬ್ಬಂದಿಗಳ ಸೇವಾವಹಿಗಳ ನಿರ್ವಹಣೆ ಕುರಿತು :–

2016–17ನೇ ಸಾಲಿನಲ್ಲಿ ಕಾಡಾ ಕೇಂದ್ರ ಕಛೇರಿ ಹಾಗೂ ಅದರ ಅಧೀನದಲ್ಲಿ ಬರುವ ಕಛೇರಿಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಸೇವಾವಹಿಗಳನ್ನು ಪರಿಶೀಲಿಸಲಾಗಿದ್ದು, ಕೆಲವಾರು ನ್ಯೂನತೆಗಳು ಕಂಡುಬಂದಿದ್ದು, ನ್ಯೂನತೆಗಳನ್ನು ಸರಿಪಡಿಸಿಕೊಂಡು ಸೇವಾವಹಿಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಲಾಗಿದೆ.

1. ಸೇವಾವಹಿಗಳಲ್ಲಿ ನೌಕರರ ಜನ್ಮದಿನಾಂಕವು ಒಂದು ಮುಖ್ಯವಾದ ದಾಖಲಾತಿಯಾಗಿದ್ದು, ಇದನ್ನು ಕೆ.ಸಿ.ಎಸ್.ಆರ್ ನಿಯಮ 405 ರಂತೆ ದಾಖಲಿಸಿ ಕಛೇರಿ ಮುಖ್ಯಸ್ಥರಿಂದ ದೃಢೀಕರಿಸಬೇಕಾಗಿರುತ್ತದೆ. ಹಲವು ಪ್ರಕರಣಗಳಲ್ಲಿ ದೃಢೀಕರಿಸದಿರುವುದು ಕಂಡುಬಂದಿರುತ್ತದೆ.
2. ಕೆ.ಸಿ.ಎಸ್.ಆರ್ ನಿಯಮ 407ರಂತೆ ಪ್ರತಿವರ್ಷ ನೌಕರರ ಸೇವಾವಹಿಗಳನ್ನು ಸಂಬಂಧಪಟ್ಟ ನೌಕರರಿಗೆ ನೀಡಿ ದಾಖಲಾಗಿರುವ ಮಾಹಿತಿಗಳು ಸರಿ ಇರುವ ಬಗ್ಗೆ ಪರಿಶೀಲಿಸಿ ಅದರಿಂದ ಸಹಿ ಪಡೆಯಬೇಕಿರುತ್ತದೆ. ಬಹಳಷ್ಟು ಪ್ರಕರಣಗಳಲ್ಲಿ ನೌಕರರಿಂದ ಪರಿಶೀಲನೆ ಆಗದಿರುವುದು ಕಂಡುಬಂದಿದ್ದು, ನಿಯಮಾನುಸಾರ ಕ್ರಮವಹಿಸಲು ಸೂಚಿಸಿದೆ.
3. ಕೆ.ಸಿ.ಎಸ್.ಆರ್ ನಿಯಮ 294 ಹಾಗೂ 302 (4) ರಂತೆ ನೌಕರರು ತಮ್ಮ ಕುಟುಂಬ ಪಿಂಚಣಿ ಮತ್ತು ಉಪದಾನಕ್ಕಾಗಿ ನಮೂನೆ 6 ಹಾಗೂ ನಮೂನೆ 2 ರಲ್ಲಿ ಕುಟುಂಬದ ಅರ್ಹ ಸದಸ್ಯರಿಗೆ ನಾಮ ನಿರ್ದೇಶನ ಮಾಡಬೇಕಾಗಿರುತ್ತದೆ. ಕೆಲವು ಪ್ರಕರಣಗಳಲ್ಲಿ ನಾಮ ನಿರ್ದೇಶನ ಮಾಡದಿರುವುದು ಪರಿಶೀಲನೆಯಲ್ಲಿ ಕಂಡುಬಂದಿದ್ದು, ಮೇಲ್ಕಂಡ ನಿಯಮದಂತೆ ಕ್ರಮವಹಿಸಲು ಸೂಚಿಸಲಾಗಿದೆ.

17. ಪ್ರಯಾಣ ಭತ್ಯೆ ಪಾವತಿ ಓಚರ್‌ಗಳಲ್ಲಿ ಕಂಡುಬಂದಿರುವ ನ್ಯೂನತೆಗಳು :–

(ಬಿ) ಕಾಡಾ ಕಛೇರಿ ವ್ಯಾಪ್ತಿಯ ಅಧಿಕಾರಿ/ಸಿಬ್ಬಂದಿ ವರ್ಗದವರ ಪ್ರಯಾಣ ಭತ್ಯೆ ಪಾವತಿ ಓಚರ್ಸ್‌ಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಸಕೃನಿ ಕಛೇರಿಗಳಿಗೆ ಸಂಬಂಧಿಸಿದ ಕೆಲವು ಪ್ರಯಾಣ ಭತ್ಯೆ ಪಾವತಿ ಓಚರ್ಸ್‌ಗಳಲ್ಲಿ ದಿನಚರಿಗಳು ಹಾಗೂ ವಾಹನದ ಲಾಗ್ ಎಕ್ಸ್‌ಟ್ರಾಕ್ಟ್‌ಗಳನ್ನು ಲಗತ್ತಿಸಿಲ್ಲದಿರವುದು ಕಂಡುಬಂದಿರುತ್ತದೆ. KCSR ನಿಯಮಾನುಸಾರ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪ್ರಯಾಣಿಸಿದ ಅವಧಿಯ ಮುಂದಿನ ತಿಂಗಳ ಒಳಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದ್ದು, ಪ್ರಯಾಣ ಭತ್ಯೆ ಬಿಲ್ಲುಗಳನ್ನು 6 ತಿಂಗಳಿನಿಂದ 8 ತಿಂಗಳಿನಷ್ಟು ವಿಳಂಬವಾಗಿ ಸಲ್ಲಿಸಿ ಪಾವತಿಸಲಾಗಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ಈ ಕುರಿತು ವಿಚಾರಣೆ ಸಂಖ್ಯೆ:9/ದಿನಾಂಕ:05.07.2018ರಲ್ಲಿ ವಿವರಣೆಯನ್ನು ಕೋರಲಾಗಿತ್ತು. ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪಾವತಿಸುವ ಸಂದರ್ಭದಲ್ಲಿ ನಿಯಮಗಳನ್ನು ಪಾಲಿಸಿ ಪಾವತಿಸಲು ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

18. ಹಾಜರಾತಿ ವಹಿಯ ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು:–

ಕಾಡಾ ಕಛೇರಿಯ ಕಾರ್ಯಪಾಲಕ ಅಭಿಯಂತರರು ವಿಭಾಗ–1 ತುಮಕೂರು ಕಛೇರಿಯ 2016–17ನೇ ಸಾಲಿನ ಸಿಬ್ಬಂದಿ ವರ್ಗದವರ ಹಾಜರಾತಿ ವಹಿಯನ್ನು ಪರಿಶೀಲಿಸಿದಾಗ ಕೆಳಗೆ ನೀಡಿರುವ ಮಾಹಿತಿಯಂತೆ ಕೆಲವು ಅಧಿಕಾರಿಗಳು ಗೈರುಹಾಜರಾಗಿದ್ದು, ಹಾಜರಾತಿ ವಹಿಯಲ್ಲಿ ಯಾವ ವಿಧದ ರಜೆಯೆಂದು ನಮೂದಿಸದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಸಂಬಂಧಪಟ್ಟವರ ರಜೆ ಮಂಜೂರಾತಿಯಾಗಿರುವ ದಾಖಲೆ ಹಾಗೂ ವೇತನ ಬಟವಾಡೆಯಾಗಿರುವ ಮಾಹಿತಿಯನ್ನು ವಿಚಾರಣಾ ಸಂಖ್ಯೆ–21.07.18 ರಲ್ಲಿ ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ಗೈರುಹಾಜರಾದ ಅವಧಿಗೆ ವೇತನ ಪಾವತಿಸಿಲ್ಲದಿರುವುದನ್ನು ದೃಢೀಕರಿಸಿರುವುದರಿಂದ ರಜಾ ಅವಧಿಯನ್ನು ಪರಿವರ್ತಿತ/ಗಳಿಕೆ ರಜೆಯೆಂದು ಪರಿಗಣಿಸಿದ್ದಲ್ಲಿ ವಿವರವನ್ನು ಸೇವಾ ಪುಸ್ತಕದಲ್ಲಿ ದಾಖಲಿಸಿ ಆದೇಶ ಪ್ರತಿಯೊಂದಿಗೆ ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ.

19. ಹೊರಗುತ್ತಿಗೆಯಡಿ ಮಾನವಸೇವೆ ಪಡೆಯಲಾಗಿದ್ದು, ಸಂಬಂಧಿಸಿದ EPF ಮತ್ತು ESI ವಂತಿಗೆಯನ್ನು ಇಲಾಖೆಗೆ ಜಮೆ ಮಾಡಿರುವ ವಿವರ ಒದಗಿಸದಿರುವುದು :–

2016–17ನೆ ಸಾಲಿನಲ್ಲಿ ಕಾಡಾ ಪ್ರಾಧಿಕಾರದ ಕೇಂದ್ರ ಕಛೇರಿ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಬಗೆಯ ನೌಕರರ ಸೇವೆಯನ್ನು ಪಡೆಯಲಾಗಿದ್ದು, ನೌಕರರಿಗೆ ಸಂಸ್ಥೆ ಮೂಲಕ 6/2016 ರಿಂದ 3/2017ರವರೆಗೆ ವೇತನ– 1207003 + ESI/PF – 46616 ಒಟ್ಟು ರೂ.12,53,649/–ಗಳನ್ನು ಪಾವತಿಸಲಾಗಿದೆ. ಸಂಬಂಧಿಸಿದ ಪಾವತಿ ವಿವರಗಳ ಪರಿಶೀಲನೆಯಲ್ಲಿ 6/2016 ರಿಂದ 3/2017ರ ಮಾಹೆಯವರೆಗಿನ ESI ಮತ್ತು PF ವಂತಿಗೆ ಪಾವತಿ ಮೊತ್ತ ಮತ್ತು ರೂ.46,616/–ಗಳನ್ನು ಸಂಬಂಧಿಸಿದ ಇಲಾಖೆಗೆ ಜಮೆ ಮಾಡಿದ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜುರಪಡಿಸುವವರೆಗೆ ಈ ಸಾಲಿನಲ್ಲಿ ಪಾವತಿಯಾಗದಿರುವ ಒಟ್ಟು ಮೊತ್ತ **ರೂ.46,616/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಈ ಸಾಲಿನಲ್ಲಿ ಪಾವತಿಸಿರುವ ವಿವರಗಳನ್ನು **ಅನುಬಂಧ – 4ರಲ್ಲಿ** ನೀಡಲಾಗಿದೆ.

20. ಹಾಜರಾತಿ ವಹಿ ಪರಿಶೀಲನೆಯಲ್ಲಿ ಸಿ.ಯು ಪ್ರಭಾಕರ್‌ರವರು ಗೈರು ಹಾಜರಾಗಿರುವ ಕುರಿತು:–

ಕಾಡಾ ಕಛೇರಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರಿಂಗ್, ಉಪ ವಿಭಾಗ–2 ತುಮಕೂರು, ಕಛೇರಿಯ 2016–17ನೇ ಸಾಲಿನ ಸಿಬ್ಬಂದಿ ವರ್ಗದವರ ಹಾಜರಾತಿ ವಹಿಯನ್ನು ಪರಿಶೀಲಿಸಿದಾಗ ಕಿರಿಯ ಇಂಜಿನಿಯರ್ ಆದ ಸಿ.ಯು ಪ್ರಭಾಕರ್ ರವರು ದಿನಾಂಕ:26.02.2016 ರಿಂದ 09.03.2016 ರವರೆಗೆ ಹಾಗೂ 11.03.2016 ರಿಂದ 17.03.2016 ಮತ್ತು ದಿನಾಂಕ:01.04.2016 ರಿಂದ 23.05.2016 ರವರೆಗೆ ಹಾಜರಾತಿ ವಹಿಯಲ್ಲಿ ಸದರಿಯವರ ಸಹಿ ಇಲ್ಲದೆ ಇರುವುದು ಹಾಗೂ ದಿನಾಂಕ:06.09.2016 ರಿಂದ 31.03.2017 ರವರೆಗೆ (x) & (A) ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಇದರಿಂದ ಶ್ರೀಯುತರು ಕಛೇರಿ ಕರ್ತವ್ಯಕ್ಕೆ ಗೈರು ಹಾಜರಾಗಿರುವುದು ಲೆಕ್ಕ ತನಿಖೆಗೆ ಕಂಡು ಬಂದಿದೆ. ಈ ಬಗ್ಗೆ ಕೆ.ಸಿ.ಎಸ್.ಆರ್ ನಿಯಮಾನನುಸಾರ ಕ್ರಮಕೈಗೊಂಡಿರುವುದಕ್ಕೆ ವಿಚಾರಣಾ ಸಂಖ್ಯೆ:17/19.07.2018 ರಲ್ಲಿ ಸೂಕ್ತ ವಿವರಣೆ

ನೀಡಲು ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ಕರ್ತವ್ಯಕ್ಕೆ ಗೈರು ಹಾಜರಾದ ಅವಧಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸಲು ಅನುಬಂಧ–1 ರಿಂದ 4 ರವರೆಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಾಡಾ, ಕಾಜಯೋ, ತುಮಕೂರು ಇವರ ಪತ್ರ ಸಂ:264, ದಿನಾಂಕ:06.03.2017 ರಂತೆ ಆರೋಪ ಪಟ್ಟಿ ತಯಾರಿಸಿ ನಿರ್ದೇಶಕರು, ಕಾಡಾ ನಿರ್ದೇಶಾನಾಲಯ, ಬೆಂಗಳೂರು. ಇವರಿಗೆ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಮತ್ತು ಸದರಿಯವರನ್ನು ಮಾತೃ ಇಲಾಖೆಗೆ ಹಿಂತಿರುಗಿಸಲು ಕೋರಲಾಗಿರುತ್ತದೆ. ಸದರಿ ನೌಕರರಿಗೆ ಗೈರು ಹಾಜರಾದ ಅವಧಿಗೆ ವೇತನ ಡ್ರಾ ಮಾಡದೆ ಇರುವುದರಿಂದ ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸುವ ಕುರಿತು ವರದಿಯನ್ನು ಲೆಕ್ಕ ತಪಾಸಣೆಗೆ ವಿವರವನ್ನು ಹಾಜರುಪಡಿಸುವಂತೆ ಸೂಚಿಸಿದೆ.

20(ಎ). ಎನ್.ಪಿ.ಎಸ್ ಮೊತ್ತವನ್ನು, PRAN ಸಂಖ್ಯೆ ಪಡೆದು ಸಂಬಂಧಿಸಿದ ಖಾತೆಗೆ ಜಮಾ ಮಾಡದೆ ಇರುವ ಬಗ್ಗೆ:–

ಕಾಡಾ ಪ್ರಾಧಿಕಾರ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಮಾಸಿಕ ವೇತನ ಬಿಲ್ಲುಗಳಲ್ಲಿ ನೂತನ ಪಿಂಚಣಿ ಯೋಜನೆ (NPS) ಬಾಬ್ತನ್ನು ಕಟಾಯಿಸಿ ಕಾಡಾ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸಲಾಗುತ್ತಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಗಮನಿಸಿದೆ. ಸರ್ಕಾರ ಆದೇಶ ಸಂಖ್ಯೆ: ಆಇ3/ಸೇನಿಸೇ/2010 ದಿನಾಂಕ:12.10.2010ರ ಆದೇಶದಂತೆ ಎನ್.ಪಿ.ಎಸ್ ಯೋಜನೆಗೆ ಒಳಪಡುವ ನೌಕರರ ವೇತನದಲ್ಲಿ ಕಟಾಯಿಸಲಾದ ಎನ್.ಪಿ.ಎಸ್ ಬಾಬ್ತನ್ನು PRAN ಸಂಖ್ಯೆಯನ್ನು ಪಡೆದು ಸಂಬಂಧಿಸಿದ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ಕೆಳಕಂಡಂತೆ ರೂ.6,58,111/–ಗಳ ಎನ್.ಪಿ.ಎಸ್ ಮೊತ್ತವನ್ನು ಕಾಡಾ ನಿಧಿಯಲ್ಲಿಯೇ ಉಳಿಸಿಕೊಂಡು ನಿರ್ವಹಿಸುತ್ತಿರುವುದು ನಿಯಮ ಬಾಹಿರವಾಗಿರುವುದರಿಂದ ಎನ್.ಪಿ.ಎಸ್ ಯೋಜನೆಯಲ್ಲಿನ ನಿಯಮಾವಳಿಗಳಂತೆ ಕ್ರಮಕೈಗೊಂಡಿರುವ ಬಗ್ಗೆ ಮಾಹಿತಿಯನ್ನು ಲೆಕ್ಕ ತನಿಖೆಗೆ ಒದಗಿಸಲು ವಿಚಾರಣಾ ಸಂಖ್ಯೆ–29/28.07.2018 ರಲ್ಲಿ ಕೋರಲಾಗಿತ್ತು. ಮಾಹಿತಿಯು ಸಮಂಜಸವಾಗಿರದ ಕಾರಣ ಎನ್.ಪಿ.ಎಸ್ ಖಾತೆಗೆ ಜಮೆ ಮಾಡಿ ವಿವರ ಒದಗಿಸುವವರೆಗೆ ನೌಕರರ ಪಿಂಚಣಿ ವಂತಿಕೆಯ ಬಾಬ್ತು **ರೂ.6,58,111/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.

21. ಸೇವೆಯಲ್ಲಿರುವಾಗಲೇ ಮರಣ ಹೊಂದಿರುವ ನೌಕರರ ಇಡುಗಂಟಿನ ಪರಿಹಾರದ ಮೊತ್ತ ಪಾವತಿ ಮಾಡದಿರುವ ಬಗ್ಗೆ:–

ಕಾಡಾ ಕಛೇರಿಯ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಭಾಗ–2, ಮೈಸೂರು ಕಛೇರಿಯ 2016–17 ನೇ ಸಾಲಿನ ಖಾಯಂ ಸಿಬ್ಬಂದಿ ವರ್ಗದ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ.ಬಿ ಪ್ರವೀಣ್, 'ಡಿ' ಗ್ರೂಪ್ ನೌಕರರು ಸೇವೆಯಲ್ಲಿರುವಾಗಲೇ ಮರಣ ಹೊಂದಿದ್ದು ಸದರಿ ನೌಕರರು ಎನ್.ಪಿ.ಎಸ್‌ಗೆ ಒಳಪಟ್ಟಿದ್ದು, ಸರ್ಕಾರದ ಆದೇಶ ಸಂಖ್ಯೆ:ಆ.ಇ/03/ಸೇ.ನಿ.ನೇ/2010 ದಿನಾಂಕ:12.10.2010 ಮತ್ತು ದಿನಾಂಕ:15.04.2011 ರನ್ವಯ ಸದರಿ ಮೃತರ ಪತ್ನಿಯಾದ ಶ್ರೀಮತಿ ಕೆ.ಸಿ.ಶೃತಿ ರವರಿಗೆ ಇಡಿಗಂಟಿನ ಪರಿಹಾರವನ್ನು ಮಂಜೂರು ಮಾಡಿದ್ದು ಈ ಸಂಬಂಧ ಬಿಲ್ಲನ್ನು ತಯಾರಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿರುತ್ತದೆ. ಸದರಿ ಇಡಿಗಂಟಿನ ಪರಿಹಾರದ ಮೊತ್ತ ರೂ.1,17,600/–ಗಳು ಪಾವತಿಯಾಗಿರುವ ಕುರಿತು ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಲು ವಿಚಾರಣಾ ಸಂಖ್ಯೆ–18/19.07.2018 ರಲ್ಲಿ ಕೋರಲಾಗಿತ್ತು. ಅಂತಿಮ ವಿವರಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ.

22. ಕಾಡಾ ಪ್ರಾಧಿಕಾರದ ವಾರ್ಷಿಕ ಲೆಕ್ಕಗಳನ್ನು ನಿರ್ವಹಿಸದಿರುವುದು:–

2016–17ನೇ ಸಾಲಿನ ಪ್ರಾಧಿಕಾರದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಹಾಗೂ ಕಾಡಾ ಕಾರ್ಯಕ್ರಮಗಳಿಗಾಗಿ ಸರ್ಕಾರದಿಂದ/ಸರ್ಕಾರೇತರ ಸಂಸ್ಥೆಗಳಿಂದ ಬಿಡುಗಡೆಯಾದ ಅನುದಾನದ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನೊಳಗೊಂಡ ಲೆಕ್ಕ ಶೀರ್ಷಿಕೆವಾರು ವಾರ್ಷಿಕೆ ಲೆಕ್ಕಗಳು (Annual Accounts) ಮಾಹಿತಿಯನ್ನು ಕರ್ನಾಟಕ ಆರ್ಥಿಕ ಸಂಹಿತೆ **ಅನುಚ್ಛೇದ**–ರಂತೆ ನಿರ್ವಹಿಸಲು ಸೂಚಿಸಿದೆ.

22 (ಎ). ಕಾಡಾ ಪ್ರಾಧಿಕಾರದ ಮಂಜೂರಾದ ಹುದ್ದೆಗಳು/ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ :–

ಕಾಡಾ ಪ್ರಾಧಿಕಾರದಲ್ಲಿ 2016–17ನೇ ಸಾಲಿಗೆ ಕಛೇರಿಯಲ್ಲಿ ಮಂಜೂರಾದ ಒಟ್ಟು ಹುದ್ದೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಖಾಲಿ ಇರುವ ಹುದ್ದೆ ಮತ್ತು ಮಂಜೂರಾದ ಹುದ್ದೆಗಳಿಗೆ ಎದುರಾಗಿ ನೇಮಕಗೊಂಡಿರುವ ಬಗ್ಗೆ ವಿವರವನ್ನು ಕೋರಿ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ–3 ರಲ್ಲಿ ಕೋರಲಾಗಿದ್ದು, ಹುದ್ದೆಗಳ ವ್ಯತ್ಯಾಸವಿರುವ ಬಗ್ಗೆ ದಿನಾಂಕ:22.06.2018ರಂದು ಲೆಕ್ಕ ತಪಾಸಣಾ ವಿಚಾರಣೆಗೆ ನೀಡಿರುವ ಉತ್ತರದಲ್ಲಿ ಕಾಡಾ ವೃಂದ ಮತ್ತು ನೇಮಕಾತಿ ನಿಯಮಗಳು 1987ರ ಪ್ರಕಾರ ಈ ಪ್ರಾಧಿಕಾರಕ್ಕೆ 316 ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ತದನಂತರ ದಿನಾಂಕ:16.01.1998 ಮತ್ತು 29.01.1998ರ ಆದೇಶಗಳಲ್ಲಿ ಕೆಲವೊಂದು ಹುದ್ದೆಗಳನ್ನು ಮೇಲ್ದರ್ಜೆಗೆ ಹಾಗೆಯೇ ಕೆಲವೊಂದು ಹುದ್ದೆಗಳನ್ನು ಮಾರ್ಪಾಡಿಸಿ ಪ್ರಾಧಿಕಾರಕ್ಕೆ ಅವಶ್ಯವಿರುವ ಹುದ್ದೆಗಳನ್ನು ಸೃಜಿಸಲಾಗಿದೆ. ಮುಂದುವರೆದು, ದಿನಾಂಕ:29.06.1999 ಮತ್ತು 20.02.2007ರ ಆದೇಶಗಳಲ್ಲಿ ಪ್ರಾಧಿಕಾರದಲ್ಲಿ ಖಾಲಿ ಇದ್ದ ಹುದ್ದೆಗಳಲ್ಲಿ ಕ್ರಮವಾಗಿ ಶೇ 5% ಹಾಗೂ ಶೇ 80% ರಷ್ಟು ಹುದ್ದೆಗಳನ್ನು ಕಡಿತಗೊಳಿಸಲಾಗಿದೆ. ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ:ಜಸಂಇ/39/ಸಿಎಎಂ/2011, ಬೆಂಗಳೂರು ದಿನಾಂಕ:17.11.2012ರಲ್ಲಿ ಪ್ರಾಧಿಕಾರಕ್ಕೆ 2 ವಿಭಾಗ ಕಛೇರಿಯಗಳನ್ನು ಹಾಗೂ 2 ತಾಂತ್ರಿಕ ಉಪ ವಿಭಾಗ ಕಛೇರಿಗಳನ್ನು ಮತ್ತು 2 ಕೃಷಿ ಮತ್ತು ಸಹಕಾರ ಉಪ ವಿಭಾಗ ಕಛೇರಿಗಳನ್ನು ಪ್ರಾಧಿಕಾರಗಳಿಗೆ ಮಂಜೂರಾದ ಹುದ್ದೆಗಳನ್ನು ಪುನರ್ ಹೊಂದಾಣಿಕೆ ಮಾಡಿಕೊಂಡು ಸೃಜಿಸಲಾಗಿದೆ. ಅಲ್ಲದೆ ಸರ್ಕಾರಿ ಆದೇಶದ ದಿನಾಂಕ:17.11.2012ರಂತೆ ಹೆಚ್ಚುವರಿಯಾಗಿದ್ದ 03 ಕೃಷಿ ಮತ್ತು ಸಹಕಾರ ಉಪ ವಿಭಾಗ ಕಛೇರಿಗಳನ್ನು ದಿನಾಂಕ:31.03.2016ರಂದು ಸಮಾಪನೆಗೊಳಿಸಿರುವದರಿಂದ ಸದರಿ ಕಛೇರಿಗಳಿಗೆ ಮಂಜೂರಾಗಿದ್ದ, ಹುದ್ದೆಗಳು ರದ್ದುಗೊಂಡಿರುತ್ತದೆ. ಆದ್ದರಿಂದ 2014–15, 2015–16 ಮತ್ತು 2016–17ನೇ ಸಾಲಿನಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆಯಲ್ಲಿ ವ್ಯತ್ಯಾಸ ಆಗಿರುತ್ತದೆ. ಪ್ರಸ್ತುತ ಈ ಪ್ರಾಧಿಕಾರದಲ್ಲಿ ಒಟ್ಟು 200 ವಿವಿಧ ವೃಂದದ ಮಂಜೂರಾದ ಹುದ್ದೆಗಳು ಇರುತ್ತವೆ ಎಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಹುದ್ದೆಗಳ ಮಾಹಿತಿ **ಅನುಬಂಧ–6 ರಲ್ಲಿ** ನೀಡಿದೆ.

23. ಕ್ರಿಯಾ ಯೋಜನೆ ಬಗ್ಗೆ:–

2016–17ನೇ ಸಾಲಿನಲ್ಲಿ ಆಯವ್ಯಯದಲ್ಲಿ ಅನುಮೋದನೆಗೊಂಡಿರುವಂತೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಈ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚವಾಗಿರುವ ಹಾಗೂ ಬಾಕಿ ಉಳಿದಿರುವ ಅನುದಾನದ ವಿವರಗಳು ಕೆಳಗಿನಂತಿವೆ.

2016–17ನೇ ಸಾಲಿನಲ್ಲಿ ಕಾಡಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಒಟ್ಟು ರೂ.4394.64 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು. ಇದರಲ್ಲಿ ರೂ.3759.63 ಲಕ್ಷಗಳ ಪ್ರಗತಿಯನ್ನು (ಆರ್ಥಿಕ ಪ್ರಗತಿ) ಮಾತ್ರ ಸಾಧಿಸಲಾಗಿದೆ. ರೂ.635.05 ಲಕ್ಷಗಳು ವಿವಿಧ ಯೋಜನೆಗಳಲ್ಲಿ ಉಳಿತಾಯವಾಗಿದ್ದು, ಪೂರ್ಣ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವುದು ಅವಶ್ಯವಾಗಿದೆ.

2016–17ನೇ ಸಾಲಿನ ವಾರ್ಷಿಕ ವರದಿ:

ಕೇಂದ್ರವಲಯದ ಕಾರ್ಯಕ್ರಮಗಳು

ಕ್ರ.ಸಂ	ವಿವರಗಳು	ವಾರ್ಷಿಕ ಗುರಿ	ಬಿಡುಗಡೆಯಾದ ಅನುದಾನ	ಆಗಿರುವ ವೆಚ್ಚ	ಉಳಿಕೆ	ಭೌತಿಕ ಗುರಿ	ಸಾಧನೆ
1	ಕಛೇರಿ ಸಿಬ್ಬಂದಿ ವೆಚ್ಚ	1323	682.13	639.28	42.85	–	–
2	ಹೊಲಗಾಲುವೆ	115.05	115.05	83.96	31.09	1342.35	919.03
3	ಬಸಿಗಾಲುವೆ ನಿರ್ಮಾಣ	12.30	12.30	8.51	3.79	283.46	198.96
4	ಬೆಳೆಪ್ರಾತ್ಯಕ್ಷಿಕೆಗಳು	5.00	5.00	4.73	0.27	94	117
5	ಭೂ ಅಭಿವೃದ್ಧಿ ತರಬೇತಿ ಅ) ಕೃಷಿ ಆ) ಸಹಕಾರ	15.00 7.00	12.00 7.00	11.05 6.97	0.95 0.03	35 07	25 07
6	ನೀರು ನಿರ್ವಹಣೆಯಲ್ಲಿ ರೈತರ ಪಾಲ್ಗೊಳ್ಳುವಿಕೆ	20.00	20.00	18.41	1.59	1850	1705.07
7	ಮೂಲಭೂತ ಸೌಕರ್ಯ	30.00	30.00	–	30.00	–	–
8	ಸವಳು ಜವಳು ಕೃಷಿ ಯೋಗ್ಯ ಮಾಡುವಿಕೆ	197.05	197.05	1.75	195.30	394.32	–
9	ವಸತಿ ಸೌಲಭ್ಯ	33.00	16.00	15.50	0.50	–	–
10	ಗೋದಾಮ ನಿರ್ಮಾಣ	13.66	7.50	–	7.50	02	–
11	ಆಯಕಟ್ಟು ರಸ್ತೆಗಳು	235.42	235.42	197.58	37.84	41.43	39.93
12	ಇತರೆ (ದಸರಾ)	116.52	6.16	–	6.16	01	–
	4705–ವಿಶೇಷ ಅಭಿವೃದ್ಧಿ ಯೋಜನೆಗಳು						
13	ಆಯಕಟ್ಟು ರಸ್ತೆಗಳು	2330.24	681.13	681.01	0.12	239.82	165.73
14	ಬಸಿಗಾಲುವೆ	246.40	8.00	7.98	0.02	4547.80	390.27
15	ಹೊಲಗಾಲುವೆ	1087.81	186.03	186.05	0.02	30363	3394.32
16	ಜೌಗು, ಸವಳು ಜವಳು ಭೂವಿಯನ್ನು ಕೃಷಿ ಯೋಗ್ಯ ಮಾಡುವಿಕೆ	1341.84	28.87	28.87	–	2687.40	63.48
	4705–ವಿಶೇಷ ಘಟಕ ಯೋಜನೆ						
17	ವಿಶೇಷಘಟಕ ಯೋಜನೆ	320.00	320.00	135.47	184.53	146.73	21.87
18	ಗಿರಿಜನ ಉಪಯೋಜನೆ	125.00	125.00	32.51	92.49	68.85	11.27

2705 ನಬಾರ್ಡ್							
19	RIDF-XVII	50.27	50.27	50.27	–	2.00	2.00
20	RIDF-XVIII	7.72	7.72	7.72	–	0.31	0.31
21	RIDF-XIX	293.91	293.91	293.91	–	11.78	11.75
22	RIDF-XX	1348.10	1348.10	1348.10	–	55.00	53.92
		927429	**4394.64**	**3759.63**	**635.05**	**42173.25**	**7126.91**

24. ಕುಂಠಿತ ಭೌತಿಕ ಸಾಧನೆ ಕುರಿತು :–

ಕಾಡಾ ಅನುಷ್ಠಾನ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು ಪರಿಶೀಲಿಸಿದಾಗ 2016–17ನೇ ಸಾಲಿಗೆ ವ್ಯತ್ಯಾಸ (ವಿವರ ಕೆಳಗಿನಂತಿದೆ) 497.10ರ ಭೌತಿಕ ಸಾಧನೆಯು ಕುಂಠಿತ ಪ್ರಗತಿ ಕಂಡುಬಂದಿರುತ್ತದೆ. ವ್ಯತ್ಯಾಸಕ್ಕೆ ಸೂಕ್ತ ವಿವರಣೆ ಅವಶ್ಯಕವಾಗಿದೆ.

(ಕಿ.ಮೀ/ಹೆಕ್ಟೇರ್‌ಗಳಲ್ಲಿ)

	2015–16	**2016–17**
1) ಕೇಂದ್ರ ವಲಯದ ಕಾರ್ಯಕ್ರಮಗಳು	3639.17	2972.06
2) ರಾಜ್ಯ ವಲಯದ ಕಾರ್ಯಕ್ರಮಗಳು	113.01	39.98
3) 4705 ವಿಶೇಷ ಅಭಿವೃದ್ಧಿ ಯೋಜನಗೆಗಳು	994.83	4046.94
4) ನಬಾರ್ಡ್–ಆಯಕಟ್ಟು ರಸ್ತೆಗಳು	2877.00	67.98
ಒಟ್ಟು	**7624.01**	**7126.91**

ಭೌತಿಕ ಸಾಧನೆ	
2015–16	7624.01
2016–17	7126.91
ವ್ಯತ್ಯಾಸ	497.10

25. ಗ್ರಾಂಟ್–ಇನ್–ಎಡ್ ಬಿಲ್ಲುಗಳ ಮೂಲಕ ಬಿಡುಗಡೆ ಮಾಡಿರುವ ಅನುದಾನಕ್ಕೆ ಹೊಂದಾಣಿಕೆ ಬಿಲ್ಲುಗಳನ್ನು ಹಾಜರುಪಡಿಸದಿರುವುದು :–

ವಿವಿಧ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸುವ ಸಲುವಾಗಿ ಕಾಡಾ ಪ್ರಾದಿಕಾರದಿಂದ ಗ್ರಾಂಟ್–ಇನ್–ಏಡ್ ಬಿಲ್ಲುಗಳ ಮೂಲಕ ಅನುದಾನ ಬಿಡುಗಡೆಯಾಗಿದ್ದು, (ವಿವರಗಳನ್ನು ಅನುಬಂಧ – 7 ರಲ್ಲಿ ನೀಡಿದೆ) ಬಿಡುಗಡೆ ಮಾಡಿರುವ ಅನುದಾನಕ್ಕೆದುರಾಗಿ ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರಗಳು, ರೈತರ ಆಯ್ಕೆ ಪಟ್ಟಿಗೆ ಕೇಂದ್ರ ಕಛೇರಿಯಿಂದ ಪಡೆದ ಅನುಮೋದನೆ ಪತ್ರ ಪಡೆದ ತರಬೇತಿ ಮೌಲ್ಯಮಾಪನ ವರದಿ, ಓಚರುಗಳು ಮತ್ತು ಉಪಯುಕ್ತತಾ ದೃಢೀಕರಣ ಪತ್ರ

(Utilization certificate) ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವಿವರಗಳನ್ನು ಹಾಜರುಪಡಿಸುವವರೆಗೆ ಅನುದಾನ ಬಿಡುಗಡೆ ಮೊತ್ತ **ರೂ.15,61,575/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

26. ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿದ ಮುಂಗಡ ಹಣಕ್ಕೆ ಎನ್.ಡಿ.ಸಿ ಲೆಕ್ಕಗಳನ್ನು ಹೊಂದಾಣಿಕೆಯಾಗದಿರುವುದು :–

2016–17ನೇ ಸಾಲಿಗೆ ದಿನಾಂಕ:31.03.2017ರ ಅಂತ್ಯಕ್ಕೆ ಕಛೇರಿಯ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಎ.ಸಿ ಬಿಲ್ಲುಗಳ ಮೂಲಕ ಮುಂಗಡ ಹಣ ಡ್ರಾ ಮಾಡಲಾಗಿದ್ದು, ಎನ್.ಡಿ.ಸಿ ಬಿಲ್ಲು ಹೊಂದಾಣಿಕೆ ಆಗದೆ ರೂ.18,95,972/–ಗಳು ಬಾಕಿ ಇರುತ್ತದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ – 36, 37 ರಂತೆ ಮುಂಗಡ ಹಣ ಡ್ರಾ ಮಾಡಿ 1 ತಿಂಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಬೇಕಾಗಿರುತ್ತದೆ. ಹೊಂದಾಣಿಕೆಯಾಗದಿರುವ ಬಗ್ಗೆ ಸೂಕ್ತ ವಿವರಣೆಯನ್ನು ಹಾಗೂ ಮುಂಗಡ ಹಣ ಡ್ರಾ ಮಾಡಿದ ಅಧಿಕಾರಿಗಳಿಂದ ಮುಂಗಣ ಹಣ ಹಾಗೂ ಬಡ್ಡಿಯೊಂದಿಗೆ ವಸೂಲಿಸಲು ಕ್ರಮಕೈಗೊಳ್ಳುವುದು ಇಲ್ಲವಾದಲ್ಲಿ ವೇತನವನ್ನು ತಡೆಹಿಡಿಯಬೇಕಾಗಿರುತ್ತದೆ. ದಾಖಲೆಗಳನ್ನು ಒದಗಿಸುವವರೆಗೆ **ರೂ.18,95,972/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

27. ಕಾಮಗಾರಿಯನ್ನು ರದ್ದುಪಡಿಸಲಾಗಿದ್ದು, ನಿಯಮಾನುಸಾರ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ವಿವರಗಳನ್ನು ಹಾಜರುಪಡಿಸದಿರುವುದು :–

Name of work : Formation of Ayacut road from Ganjam road to 4th mile of Bangalore doddi canal Sri rangapatna taluk, Est Cost - 2.25 lakhs contract Amt 2.21 lakhs ಮೇಲ್ಕಂಡ ಕಾಮಗಾರಿಯನ್ನು ಶ್ರೀ ಎಸ್.ಎಸ್.ಮಂಜುನಾಥ್ ಕ್ಲಾಸ್ 1–ಬಿ ಗುತ್ತಿಗೆದಾರರು ಇವರಿಗೆ ವಹಿಸಿಕೊಡಲಾಗಿದ್ದು, ಸದರಿಯವರು ಕಾಮಗಾರಿಯನ್ನು ಪೂರ್ಣಗೊಳಿಸದೆ ಕೇವಲ 1.34 ಲಕ್ಷ ಆರ್ಥಿಕ ಪ್ರಗತಿ ಸಾಧಿಸಿ ಕಾಮಗಾರಿ ಸ್ಥಗಿತಗೊಳಿಸಿದ್ದರಿಂದ ಆಡಳಿತಾಧಿಕಾರಿರವರು ಗುತ್ತಿಗೆದಾರರಿಗೆ ಕಾಮಗಾರಿಯ ಅಂದಾಜು ಮೊತ್ತ ರೂ.2.25 ಲಕ್ಷಕ್ಕೆ 7.5% ರಷ್ಟು ಅಂದರೆ ರೂ.16,600/– ದಂಡ ವಿಧಿಸಲು ಹಾಗೂ ಗುತ್ತಿಗೆದಾರರ Risk & Cost ಮೇಲೆ ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಲು ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸೂಚಿಸಲಾಗಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ವಿಚಾರಣೆ ಸಂಖ್ಯೆ:38/ದಿನಾಂಕ:06.08.2018ರಲ್ಲಿ ಸದರಿ ದಂಡದ ಮೊತ್ತ ರೂ.16,600/–ಗಳನ್ನು ಗುತ್ತಿಗೆದಾರರಿಂದ ವಸೂಲಿಸಿರುವ ಕುರಿತು, ಟೆಂಡರ್‌ನ್ನು ರದ್ದುಪಡಿಸಿ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಲು ಕೋರಲಾಗಿತ್ತು. ಸದರಿ ಕಾಮಗಾರಿಯ ದಂಡ ವಸೂಲಾತಿಗೆ ಸಂಬಂಧಿಸಿದಂತೆ ಶ್ರೀ ಎಸ್.ಎಸ್.ಮಂಜುನಾಥ್, 1ನೇ ದರ್ಜೆ ಗುತ್ತಿಗೆದಾರರು ಇವರ ಇ.ಎಂ.ಡಿ ಮೊತ್ತ (Contract Amount 2,21,000/- ಕ್ಕೆ 2.5%) ರೂ.5,525/–ಗಳನ್ನು ಮುಟ್ಟುಗೋಲು ಹಾಕಿಕೊಂಡು ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವವರೆಗೆ ದಂಡದ ಮೊತ್ತ **ರೂ. 22,125/–ಗಳನ್ನು** ಸದರಿ ಗುತ್ತಿಗೆದಾರರಿಂದ ವಸೂಲಿಸಲು ಕ್ರಮ ತೆಗೆದುಕೊಳ್ಳುವುದು.

28. ಗುತ್ತಿಗೆದಾರರ ಕಾಮಗಾರಿ ಬಿಲ್ಲುಗಳಲ್ಲಿ Shrinkage ಪ್ರಮಾಣ ಹಾಗೂ Royalty ಮೊತ್ತವನ್ನು ಕಡಿಮೆ ಕಟಾಯಿಸಿರುವುದು:–

ಕಾಡಾ ಕಛೇರಿಯ 2016–17ನೇ ಸಾಲಿನ ಪಾವತಿ ಓಚರ್‌ಗಳನ್ನು ಪರಿಶೀಲಿಸಿದಾಗ ಕೆಲವು ಗುತ್ತಿಗೆದಾರರ ಕಾಮಗಾರಿ ಬಿಲ್ಲುಗಳಲ್ಲಿ Shrinkage ಪ್ರಮಾಣ ಹಾಗೂ Royalty ಮೊತ್ತವನ್ನು ಕಡಿಮೆ ಕಟಾಇಸಿರುವುದು ಕಂಡುಬಂದಿರುತ್ತದೆ. ವಿವರಗಳನ್ನು **ಅನುಬಂಧ–8 ಮತ್ತು 8(ಎ)ರಲ್ಲಿ** ನೀಡಲಾಗಿದೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:72/ದಿನಾಂಕ:05.09.2018ರಲ್ಲಿ ವಿವರಣೆಯನ್ನು ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ವಸೂಲಾತಿಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಸದರಿ ವಸೂಲಾತಿ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಿಸಿ ಲೆಕ್ಕತನಿಖೆಗೆ ವಿವರವನ್ನು ಹಾಜರುಪಡಿಸುವವರೆಗೆ Shrinkage ಪ್ರಮಾಣದ ಮೊತ್ತ **ರೂ.1,13,015/– ಹಾಗೂ Royalty** ವ್ಯತ್ಯಾಸದ ಮೊತ್ತ **ರೂ.2,77,774/–ಗಳು ಒಟ್ಟು ಮೊತ್ತ ರೂ.3,90,789/–ಗಳನ್ನು ವಸೂಲಾತಿಯಲ್ಲಿಡಲಾಗಿದೆ.**

29. ವಿಚಾರ ಸಂಕಿರಣದಲ್ಲಿ ಭಾಗವಹಿಸಿರುವ ಪೂರ್ಣ ಪ್ರಮಾಣದ ಓಚರ್ಸ್‌ಗಳನ್ನು ಹಾಜರುಪಡಿಸದಿರುವುದು:–

ಕಾಡಾ ಕಛೇರಿ ವ್ಯಾಪ್ತಿಯ ಅಧಿಕಾರಿ/ಸಿಬ್ಬಂದಿ ವರ್ಗದವರ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಕೆಲವು ನ್ಯೂನ್ಯತೆಗಳು ಕಂಡು ಬಂದಿರುತ್ತದೆ. ವಿವರಗಳನ್ನು **ಅನುಬಂಧ–9ರಲ್ಲಿ** ನೀಡಲಾಗಿದೆ. ಸದರಿ ನ್ಯೂನ್ಯತೆಗಳಿಗೆ ದಾಖಲಾತಿ/ವಿವರಣೆಯನ್ನು ಒದಗಿಸಲು ವಿಚಾರಣೆ ಸಂಖ್ಯೆ:12/ ದಿನಾಂಕ:12.07.2018 ರಲ್ಲಿ ಕೋರಲಾಗಿತ್ತು. ಕೋರಿರುವ ದಾಖಲಾತಿ/ಮಾಹಿತಿಯನ್ನು ಒದಗಿಸದಿರುವುದರಿಂದ ನವದೆಹಲಿಯಲ್ಲಿ ನಡೆದ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಿದ ಬಾಬ್ತು ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.43,394/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

30. ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸಿದ್ದು, ಕುಂಠಿತ ಪ್ರಗತಿಯನ್ನು ಸಾಧಿಸಿರುವ ಕುರಿತು :–

1. Formation, Metalling of road form Bettadapura kittur to Doddagowdana koppal coming under Distributiory - 20 of PLIC in periyapatna taluk EST COST : 15.00 Lakhs Bill Amount Rs. 14,87,564/- (Vr No.69/20.10.2016)
2. Formation & Metalling of road from Tamnanahalli, Borekoppal to Guruvayyana Koppalu coming under DY-30 of PLIC in Periyapatna taluk Est Cost - 15.00 lakhs Bill Amount - 16,45,749/- (Vr No.68/20.10.2016)

2016–17ನೇ ಸಾಲಿನಲ್ಲಿನ ಮೇಲ್ಕಂಡ ಪಾವತಿ ಓಚರ್‌ಗಳನ್ನು ಪರಿಶೀಲಿಸಿದಾಗ ಮೇಲ್ಕಂಡ ಕಾಮಗಾರಿಗಳನ್ನು ಕರಾರಿನ ಪ್ರಕಾರ ಪೂರ್ಣಗೊಳಿಸದೆ, 215 ದಿನಗಳ ವಿಳಂಬದ ಅವಧಿಯನ್ನು ತೆಗೆದುಕೊಂಡಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ಕರಾರಿನ ಪ್ರಕಾರ ಪೂರ್ಣ ಪ್ರಗತಿ ಸಾಧಿಸಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ಥಳವನ್ನು ಗುತ್ತಿಗೆದಾರರು ಇಲಾಖಾವಶಕ್ಕೆ PWD A Code & D Code ಪ್ರಕಾರ ಹಸ್ತಾಂತರಿಸಬೇಕಾಗಿರುತ್ತದೆ. ಹಾಗೂ ನಿಯಮಾನುಸಾರ STD Clause 36 ರಂತೆ liquidated damages ಗೆ ಹೊಣೆಗಾರರಾಗಬೇಕಾಗಿರುತ್ತದೆ.

ಮೇಲ್ಕಂಡ ಪಾವತಿ ಓಚರ್‌ಗಳಲ್ಲಿ ರೂ.1075/–ದಂಡವನ್ನು ಕಟಾಯಿಸಲಾಗಿರುವುದು ಕಂಡುಬಂದಿದ್ದು, ಸದರಿ ವಿಳಂಬದ ಅವಧಿಗೆ (Defective liabilities) ರಂತೆ ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಪ್ರಗತಿ ಸಾಧಿಸದೆ ಇದ್ದುದರಿಂದ ಕುಂಠಿತ ಪ್ರಗತಿಯ ಮೊತ್ತಕ್ಕೆ ಶೇ 1 ರಂತೆ ದಂಡ ವಿಧಿಸಿ ಸಂಬಂಧಿಸಿದವರಿಂದ ವಸೂಲಾತಿಗೆ ಕ್ರಮವಹಿಸಿ ಲೆಕ್ಕತನಿಖೆಗೆ ವಿವರವನ್ನು ಒದಗಿಸಲು ವಿಚಾರಣೆ ಸಂಖ್ಯೆ:58/ದಿನಾಂಕ:28.08.2018ರಲ್ಲಿ ಕೋರಲಾಗಿತ್ತು. ಅನುಪಾಲನಾ ವರದಿಯಲ್ಲಿ ತಿಳಿಸಿರುವಂತೆ ರೈತರು ಕಾಮಗಾರಿಯನ್ನು ನಿರ್ವಹಿಸಲು ಅಡ್ಡಿ ಉಂಟು ಮಾಡಿದ್ದರಿಂದ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಗೆ ದಂಡ ಶುಲ್ಕವನ್ನು ವಿಧಿಸಲಾಗಿದೆ. ಆದರೆ ಕುಂಠಿತ ಪ್ರಗತಿ ಬಗ್ಗೆ ಪ್ರಸ್ತಾವನೆ ಇಲ್ಲದಿರುವುದರಿಂದ ನಿಯಮಾನುಸಾರ ಬಿಲ್ಲಿನ ಮೊತ್ತ ರೂ.14,87,564/–ಕ್ಕೆ ಶೇ 1 % ರಂತೆ ರೂ.14,875/– ಹಾಗೂ ರೂ.16,45,749/–ಕ್ಕೆ ಶೇ 1% ರಂತೆ ರೂ.16,457/– ಒಟ್ಟು ರೂ.31,332/–ಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿಸಿ ಕಾಡಾ ನಿಧಿಗೆ ಜಮೆ ಮಾಡಿ ವಿವರವನ್ನು ಲೆಕ್ಕತನಿಖೆಗೆ ಒದಗಿಸಲು ಸೂಚಿಸಿದೆ.

31. ಹೇಮಾವತಿ, ತುಮಕೂರು ವಿಭಾಗದ ಕಾಮಗಾರಿ Improvements to road from Vadavangatta to K.Metigatta ಗೆ ಸಂಬಂಧಿಸಿದಂತೆ M.B No.1398 ಮತ್ತು ಇತರ ದಾಖಲೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿದೆ ಇರುವುದು :–

ಹೇಮಾವತಿ ತುಮಕೂರು ವಿಭಾಗದ NABARD – 2705ನ ಕಾಮಗಾರಿ Improvement to road from Vadvagatta to Kametigatta ಕಾಮಗಾರಿಗೆ ಸಂಬಂಧಿಸಿದಂತೆ BR.No–1045/16.03.2017 V.r No-326/30.03.2017 Cq No-719385 ರಲ್ಲಿ ರೂ.41,51,772/–ಗಳನ್ನು ಪಾವತಿಸಲಾಗಿದೆ. ಆದರೆ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ M.B No-1398 C.R report Shedule B QC Tender Process file EMD, FSD ತಾಂತ್ರಿಕ ಮಂಜೂರಾತಿ ಆಡಳಿತಾತ್ಮಕ ಮಂಜೂರಾತಿಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ. ಆದ್ದುದರಿಂದ ಸದರಿ ದಾಖಲೆಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವವರೆಗೆ ಬಿಲ್ಲಿನ ಮೊತ್ತ **ರೂ.41,51,722/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

32. ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾಯಿಸಬೇಕಾದ ವಿವರಣಾ ಪಟ್ಟಿಯನ್ನು (Royalty Statement) MB ಯಲ್ಲಿ ನಮೂದಿಸಿ ದೃಢೀಕರಿಸದೆ ಇರುವುದು :–

ವಿವಿಧ ಕಾಮಗಾರಿಯ ಬಿಲ್ಲುಗಳಲ್ಲಿ ರಾಜಧನ ಕಟಾಯಿಸಬೇಕಾದ ವಿವರಣಾ ಪಟ್ಟಿಯನ್ನು (Royalty Statement) MB ಯಲ್ಲಿ ನಮೂದಿಸಿ ದೃಢೀಕರಿಸದೆ ಇರುವುದು ಲೆಕ್ಕ ತನಿಖೆಯಲ್ಲಿ ಕಂಡುಬಂದಿರುತ್ತದೆ. ವಿವರಣೆಗಳನ್ನು ನಮುದಿಸಿ ದೃಢೀಕರಿಸಲು ಸೂಚಿಸಿದೆ.

33. ಎಂ.ಬಿ ಪುಸ್ತಕಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದೆ ಇರುವುದು :–

2016–17ನೇ ಸಾಲಿನಲ್ಲಿ ನಿರ್ವಹಿಸಿದ ಕಾಮಗಾರಿಗಳ ಈ ಕೆಳಕಂಡ ಎಂ.ಬಿ ಪುಸ್ತಕಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸಿರುವುದಿಲ್ಲ. ಎಂ.ಬಿ. ನಂ. 1383, 5905198, 1508, 1275, 1398, EMB–03, EMB–04, EMB–44 1297, 1398, 1253, 1298, 1597, 1513, (ಆಡಿಟ್ ವಿಚಾರಣಾ ಸಂಖ್ಯೆ:56/2018–19) ಮೇಲ್ಕಂಡ ಎಂ.ಬಿಗಳನ್ನು ಹಾಜರುಪಡಿಸಲು ಸೂಚಿಸಿದೆ.

34. ಬಸಿಗಾಲುವೆ ಕಾಮಗಾರಿಗೆ ಸಂಬಂಧಿಸಿದಂತೆ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿರುವ ದಾಖಲೆಗಳು ಲಭ್ಯವಿಲ್ಲದಿರುವ ಬಗ್ಗೆ:–

2016–17ನೇ ಸಾಲಿನ 4705 SCP ಬಸಿಗಾಲುವೆ ಕಾಮಗಾರಿ ಸಂಬಂಧಿಸಿದ ಟೆಂಡರ್–ಕಡತಗಳನ್ನು ಪರಿಶೀಲಿಸಿದಾಗ, Construction of s-page drain in Vishekantegowda's and others land near Ullenahalli Karalung—ditalla under by:28 of Harangi left Bank canal in Arakalagudu Indent-812 ಕಾಮಗಾರಿಗೆ ಸಂಬಂಧಿಸಿದಂತೆ ಬಿಲ್ಲಿನ ಮೊತ್ತ ರೂ.3,99,407/– CAR No–134/16–17 ದಾಖಲೆಗಳನ್ನು ಪರಿಶೀಲಿಸಿದಾಗ ಕಾಮಗಾರಿಯನ್ನು ಕೆ.ವೆಂಕಟೇಶ್ III-Class ಗುತ್ತಿಗೆದಾರರು ಇವರಿಗೆ ವಹಿಸಿಕೊಟ್ಟಿದ್ದು, ಗುತ್ತಿಗೆದಾರರ ಮನವಿಯ ಮೇರೆಗೆ ಟೆಂಡರನ್ನು ರದ್ದುಪಡಿಸಿ ನಂತರ ದಿನಾಂಕ28.03.2017 ರಲ್ಲಿ ಟೆಂಡರ್‌ನ IInd call ನಲ್ಲಿ ಕಾಮಗಾರಿಯನ್ನು ಎಸ್.ಸಿ ಕೆಂಗೇಗೌಡ Ist class ಗುತ್ತಿಗೆದಾರರು, ಇವರಿಗೆ ವಹಿಸಿಕೊಟ್ಟಿರುವುದು ತನಿಖೆ ವೇಳೆ ಕಂಡು ಬಂದಿದ್ದು, ನಿಯಮಾನುಸಾರ ಕೆ.ವೆಂಕಟೇಶ್ ಗುತ್ತಿಗೆದಾರರ EMD ಮೊತ್ತ ರೂ.11,500/–ಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ವಿವರಗಳು ಲೆಕ್ಕ ತನಿಖಾ ಅವಧಿಯಲ್ಲಿ ಲಭ್ಯವಿರುವುದಿಲ್ಲ. EMD ಮೊತ್ತ ರೂ.11,500/–ಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ದಾಖಲೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವವರೆಗೆ **ರೂ.11,500/–ಗಳನ್ನು ವಸೂಲಾತಿಗೆ ಸೂಚಿಸಿದೆ.**

35. 2016–17ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ನೀರಾವರಿ ಸೌಲಭ್ಯಗಳ ಕಾಮಗಾರಿಗಳಿಗೆ Geologist ರವರ ವರದಿಗಳು ಮತ್ತು ಮುಂದುವರೆದ ಕಾಮಗಾರಿಗಳಿಗೆ ಅನುಮೋದಿತ ಆದೇಶ ಪ್ರತಿ ಲಭ್ಯವಿಲ್ಲದಿರುವುದು:

2016–17ನೆ ಸಾಲಿನಲ್ಲಿ ಲೆಕ್ಕಶೀರ್ಷಿಕೆ – 4705 ವಿಶೇಷ ಘಟಕ ಯೋಜನೆಯಡಿ (SCP) ಮತ್ತು ಗಿರಿಜನ ಉಪಯೋಜನೆ (TSP) ಅನುದಾನದ ಅಚ್ಚುಕಟ್ಟು ಪ್ರದೇಶದ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳ ಕಡತ ಪರಿಶೀಲಿಸಿದಾಗ ಕಾರ್ಯಪಾಲಕ ಇಂಜಿನಿಯರ್ ನಂ.2, ಕಾಡಾ, ಮೈಸೂರು ವಿಭಾಗದ–13 ತಾಲ್ಲೂಕುಗಳಿಗೆ ಲೆಕ್ಕಶೀರ್ಷಿಕೆ – 4705 SDPರಡಿ ಮಂಜೂರಾಗಿರುವ ವಿವರ ಕೆಳಗಿನಂತಿದೆ.

SCP ಗೆ ಒಟ್ಟು ಮೊತ್ತ – 66.90 ಲಕ್ಷ

TSP ಗೆ ಒಟ್ಟು ಮೊತ್ತ – 34.00 ಲಕ್ಷ

ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. (ಆದೇಶ ಸಂಖ್ಯೆ:– ಕಾಡಾ/ಕಾಜಯೋ/ತಾಂತ್ರಿಕ/ಸ.ಇಂ–1/2902/2016–17 ದಿನಾಂಕ:26.10.2016) ಕಡತವನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳನ್ನು ಗಮನಿಸಲಾಗಿದ್ದು, ವಿವರಣೆಯನ್ನು ಕೋರಿ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:32/31.07.2018ರಲ್ಲಿ ನೀಡಲಾಗಿತ್ತು. ಸೂಕ್ತ ಮಾಹಿತಿಗಳನ್ನು ಅಂದರೆ ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ.

1. ಕಾಮಗಾರಿಗಳ ಪ್ರಾರಂಭದ ಸಂದರ್ಭದಲ್ಲಿ ಪಡೆದ ಅಧಿಕೃತ Geologist ರವರ ವರದಿಗಳನ್ನು ಹಾಜರುಪಡಿಸುವುದು.

2. ಕೈಗೆತ್ತಿಕೊಳ್ಳುವ ಕಾಮಗಾರಿಗಳನ್ನು ನಿಬಂಧನೆಯನುಸಾರ ಆಯಾ ಆರ್ಥಿಕ ಸಾಲಿನಲ್ಲೇ ಪೂರ್ಣಗೊಳಿಸಿ ಹುಂಡಿಗಳನ್ನು ಪಾವತಿ ಮಾಡಬೇಕಾಗಿರುತ್ತದೆ. ಮತ್ತು ಯಾವುದೇ ಕಾರಣಕ್ಕೂ ಕಾಮಗಾರಿಗಳನ್ನು ಮುಂದುವರೆಸಿದಲ್ಲಿ ಮುಂದಿನ ಆರ್ಥಿಕ ಸಾಲಿನಲ್ಲಿ ಅಂತಹ ಕಾಮಗಾರಿಗಳಿಗೆ ಅನುದಾನ ಲಭ್ಯತೆ ಇರುವುದಿಲ್ಲ. ಆರ್ಥಿಕ ಸಾಲಿನಲ್ಲೇ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಸದರಿ ನಿಬಂಧನೆಯನುಸಾರ ಪ್ರಸ್ತುತ ಸಾಲಿನಲ್ಲಿ ನಿಯಮ ಪಾಲನೆಯಾಗದಿರುವ ಬಗ್ಗೆ ಸೂಕ್ತ ಕಾರಣ ನೀಡುವುದು.

2016–17ನೇ ಸಾಲಿನ ವಾರ್ಷಿಕ ಕಾರ್ಯಕ್ರಮ ಪಟ್ಟಿ ಪರಿಶೀಲಿಸಿದಾಗ SCP/TSP ಯೋಜನೆಯಡಿ ಮುಂದುವರೆದ ಕಾಮಗಾರಿಗಳಿಗೆ ಅನುಮೋದಿಸಲಾಗಿದ್ದು, ಹಾಗೂ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ದಾಖಲಿಸಲಾಗಿದೆ. ಮುಂದುವರೆದ ಕಾಮಗಾರಿಗಳಿಗೆ ಮತ್ತು ಪ್ರಗತಿ ಹಂತದ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ 4705-SDP ರಡಿ ಖರ್ಚು ಭರಿಸಲು ನಿಯಮಾನುಸಾರ ಸರ್ಕಾರದ ಆದೇಶ ಪ್ರತಿಯನ್ನು ಲೆಕ್ಕ ತನಿಖೆಗೆ ಒದಗಿಸುವವರೆಗೆ **ಮೊತ್ತ ರೂ.55,79,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

36. ಕಾಮಗಾರಿಯ ಕಾಲಾವಧಿ ವಿಸ್ತರಣೆ ಅನುಮೋದನೆ/ಮುಂದುವರೆದ ಕಾಮಗಾರಿ ಆಯವ್ಯಯ ಅನುಮೋದನೆ ಹಾಗೂ ಕಾಮಗಾರಿ ಪರಿಷ್ಕೃತ ಅಂದಾಜು ಅನುಮೋದನೆ ಪ್ರತಿ ಒದಗಿಸುವ ಕುರಿತು :–

2016–17ನೇ ಸಾಲಿನ ಕಾಡಾ ಕಾಮಗಾರಿ

Name of work - Improvements from Road Bettada Sathenhally Village on C.N.K road to Siganahally village and Link to Tavanandi Boranahalli Villages Coming under the atchakat of Kamasamudra Lift irrigation scheme H.N pura CER No.490/2012-13 ದಿನಾಂಕ:29.01.2013

ಪ್ರಸ್ತುತ ಕಾಮಗಾರಿ ಬಿಲ್ಲಿನ ಮೊತ್ತ	–	8,56,760/–
ಕಾಮಗಾರಿಯ ಅಂದಾಜು ಮೊತ್ತ	–	316.00 ಲಕ್ಷ
ಗುತ್ತಿಗೆ ಮೊತ್ತ	–	3,36,24,887/–
ಗುತ್ತಿಗೆ ಕರಾರು ಸಂಖ್ಯೆ	–	68/2013–14 ದಿನಾಂಕ:16.12.2013
ಓಚರ್ ಸಂಖ್ಯೆ	–	327/30.03.2017
ಕಾಮಗಾರಿ ಪ್ರಾರಂಭಿಸಿದ ದಿನಾಂಕ	–	02.06.2014
ನಿಗದಿಪಡಿಸಿದ ಮುಕ್ತಾಯ ದಿನಾಂಕ	–	01.04.2015
ವಾಸ್ತವವಾಗಿ ಮುಕ್ಯಾಯ ದಿನಾಂಕ	–	30.12.2016
ನೀಡಲಾದ ಅವಧಿ	–	10 ತಿಂಗಳು
ಎಂ.ಬಿ ಸಂಖ್ಯೆ	–	4007
ಧನಾದೇಶ ಸಂಖ್ಯೆ	–	719386/30.03.2017

ಸದರಿ ಕಾಮಗರಿಯ ಬಿಲ್ಲನ್ನು ಪರಿಶೀಲಿಸಿದಾಗ 2014ರ ಅವಧಿಯಲ್ಲಿ ಕಾಮಗಾರಿಯನ್ನು ವಹಿಸಲಾಗಿದ್ದು, ಸುಮಾರು 1 ವರ್ಷ 11 ತಿಂಗಳು ವಿಳಂಬವಾಗಿ ಕಾಮಗಾರಿ ನಿರ್ವಹಿಸಲಾಗಿದ್ದು, ವಿಳಂಬದ ಅವಧಿಗೆ ಸಕ್ಷಮ ಪ್ರಾಧಿಕಾರದ ಕಾಲಾವಧಿ ವಿಸ್ತರಣೆ ಹಾಗೂ ಪ್ರತಿ ಆರ್ಥಿಕ ವರ್ಷದಲ್ಲಿ ಕಾಮಗಾರಿ ಮುಂದುವರೆದ ಅನುಮೋದನೆ ಮತ್ತು ಹೆಚ್ಚುವರಿ ಮೊತ್ತಕ್ಕೆ ಕಾಮಗಾರಿ ಪರಿಷ್ಕೃತ ಅಂದಾಜುಪಟ್ಟಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದಿರುವ ಪ್ರತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸದಿರುವುದರಿಂದ ಬಿಲ್ಲಿನ ಪಾವತಿ ಮೊತ್ತ **ರೂ.8,56,760/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

37. ಕಾಮಗಾರಿಯಲ್ಲಿ ಉಂಟಾಗಿರುವ ಹೆಚ್ಚುವರಿ ಮೊತ್ತಕ್ಕೆ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದಿರುವುದು :–

2016–17ನೇ ಸಾಲಿನ ನಬಾರ್ಡ್–ಕಾಮಗಾರಿ RIDF-XIII MJ-18148 ರ ಮೈಸೂರು ಜಿಲ್ಲೆ – ನಂಜನಗೂಡು ತಾಲ್ಲೂಕಿನ ಟಿ.ನರಸೀಪುರ – ನಂಜನಗೂಡು ರಸ್ತೆಯಿಂದ ಗೆಜ್ಜಗನಹಳ್ಳಿಯನ್ನು ಇಗ್ಗಲಿ ಗ್ರಾಮದ ಮುಖಾಂತರ ಸೇರುವ ರಸ್ತೆ ಬಗ್ಗೆ

ಕಾಮಗಾರಿಯ ಮಂಜೂರಾತಿ ಅಂದಾಜು ಮೊತ್ತ – 195.00 ಲಕ್ಷ

ಗುತ್ತಿಗೆದಾರರ ಹೆಸರು – ಶ್ರೀ ಮಹದೇವ

ಕಾಮಗಾರಿಯ ಮೊತ್ತ – 187.57 ಲಕ್ಷ

ಗುತ್ತಿಗೆ ಮೊತ್ತ – 221.02 ಲಕ್ಷ

ಕಾಮಗಾರಿಯ ಬಿಲ್ಲುಗಳಲ್ಲಿ ಉಳಿದ ಮೊತ್ತ ರೂ.33.28 ಲಕ್ಷಗಳಿಗೆ EIRL 2 ಐಟಂಗಳಾಗಿದ್ದು,

Work to be done – 2302638

EFI A mount – 9,63,057 (555349 ಮತ್ತು EIRL Amount – 4,07,708)

EFI ಮತ್ತು EIRL ಪ್ರಸ್ತಾವನೆಗೆ ವೆಚ್ಚವನ್ನು ಭರಿಸಲು ಆಡಳಿತಾಧಿಕಾರಿಗಳು, ಮೈಸೂರು ರವರ ಪತ್ರ ಸಂಖ್ಯೆ:ಕಾಡಾ/ಕಾಜಯೋ/ಇಂಜಿ ಶಾಖೆ/1494/2016–17 ದಿನಾಂಕ:14.07.2016ರಲ್ಲಿ ಅನುಮೋದನೆ ನೀಡಲಾಗಿದೆ. EFI & EIRL ಅನುಮೋದನೆಗೆ ಸಂಬಂಧಿಸಿದಂತೆ ಅಧಿಕಾರಿಗಳು ಹೊಂದಿರುವ ಆರ್ಥಿಕ /ತಾಂತ್ರಿಕ ಪ್ರತ್ಯಾಧಿಕಾರ ಆದೇಶ ಪ್ರತಿಯನ್ನು ಹಾಗೂ ಸಕ್ಷಮ ಪ್ರಾಧಿಕಾರದಿಂದ ಅನುಮೋನೆ ಪಡೆದಿರುವ ಕಾಮಗಾರಿಯ ಪರಿಷ್ಕೃತ ಅಂದಾಜು ಅನುಮೋದನೆ ಪ್ರತಿಯನ್ನು ಲೆಕ್ಕತಪಾಸಣೆಗೆ ಒದಗಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ: 61/30.08.2018ರಲ್ಲಿ ಕೋರಲಾಗಿದ್ದು, ಅನುಪಾಲನಾ ವರದಿಯಲ್ಲಿ ಕಾಮಗಾರಿಯ ಒಟ್ಟು ವೆಚ್ಚ ರೂ.219.02 ಲಕ್ಷಗಳಾಗಿದ್ದು, ಕಾಮಗಾರಿಯಲ್ಲಿ ಉಂಟಾಗಿರುವ ಹೆಚ್ಚುವರಿ ವೆಚ್ಚವು ಪ್ರಮುಖವಾಗಿ ಟೆಂಡರ್ ಪ್ರೀಮಿಯಂ ನಿಂದ ಉಂಟಾಗಿರುತ್ತದೆ. ಸದರಿ ಹೆಚ್ಚುವರಿ ವ್ಯತ್ಯಾಸದ ಮೊತ್ತಕ್ಕೆ ಕಾಮಗಾರಿಯ ಪರಿಷ್ಕೃತ ಅಂದಾಜು ವೆಚ್ಚವನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದಿರುವ ಆದೇಶ ಪ್ರತಿಯನ್ನು ಲೆಕ್ಕ ತನಿಖೆಗೆ ಒದಗಿಸದಿರುವುದರಿಂದ **ರೂ.9,63,057/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

